ಶ್ರೀ ಡಿ.ಎನ್.ಜೀವರಾಜ್ :– ಮಾನ್ಯ ರಮೇಶ್ ಕುಮಾರ್ ಅಂತಹವರ ಭಾಷಣ ಕೇಳಲಿಕ್ಕೂ ಯಾರೂ ಇಲ್ಲವಲ್ಲಾ?

ಅಧ್ಯಕ್ಷರು :–ತಾವುಗಳು ಇದ್ದರೆ ಸಾಕು ಬಿಡಿ!

ಶ್ರೀ ಕೆ.ಆರ್.ರಮೇಶ್ ಕುಮಾರ್ :– ಮಾನ್ಯ ಜೀವರಾಜ್‌ರವರೆ, ನಾನು ಮತ್ತು ನೀವು ಮಾತನಾಡುವುದೆಲ್ಲವೂ record ಆಗುತ್ತದೆ. ಯಾರನ್ನೋ ಮೆಚ್ಚಿಸಲಿಕ್ಕೆ. Certificate ತೆಗೆದುಕೊಳ್ಳಲಿಕ್ಕೆ ಮಾತನಾಡುವ stage ಅನ್ನು ನಾನು ದಾಟಿ ಬಿಟ್ಟಿದ್ದೇನೆ. ಇಲ್ಲಿ ಒಳಗೆ ಬರುವುದೇ ನಮ್ಮ ಪುಣ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಒಳಗೆ ಬಂದಾಗ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ಡಿ.ಎನ್.ಜೀವರಾಜ್ :– ತಮ್ಮ ಸಲಹೆಗಳನ್ನು ಸರ್ಕಾರ ಕೇಳಿದ್ದರೆ, ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತಿತ್ತು.

ಅಧ್ಯಕ್ಷರು :– ಕೇಳುತ್ತಾರೆ ಬಿಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ :– ಮುಂದೆ ಯಾವಾಗಲಾದರೂ ಒಂದು ದಿವಸ ನೀವು ಮತ್ತೆ ಬರುತ್ತೀರಲ್ಲಾ? ಈಗ ತಿಳಿದುಕೊಂಡಿರಿ, ಮುಂದೆ ನಿಮಗೆ ಅನುಕೂಲವಾಗುತ್ತದೆ. ಅವರಿಗೆ ಬೇಕಾಗಿಲ್ಲವೆಂದರೆ, ನೀವಾದರೂ ತಿಳಿದುಕೊಂಡಿರಿ.

8. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ನಾನು ಈಗ ಇಲ್ಲಿರಬೇಕಾದರೆ ಗೆಳೆಯರಾದ ಮಾನ್ಯ ಗೋವಿಂದ ಕಾರಜೋಳ್‌ರವರು ನನಗೊಂದು paperಕೊಟ್ಟರು. Proposed draft. The Karnataka Scheduled Caste Sub-Plan Tribal Sub-PLAN Planning allocation and utilization of financial resources Bill,–2013 ಎಂಬ ಪೇಪರ್ ಅನ್ನು ಅವರು ನನಗೆ ಕೊಟ್ಟರು. ಅಂದರೆ, ನಮ್ಮ ಲಾ ಮಿನಿಸ್ಟರ್ ಕೆಲಸ ಸುಲಭವಾಯಿತು. ನಾನು ಯಾವ ವಿಚಾರವನ್ನು ಪ್ರಸ್ತಾಪಿಸಿ ಮಾತನಾಡುತ್ತಿದ್ದೆನೋ, ಅದಕ್ಕೆ ಇದು ಸಂಬಂಧಿಸಿದೆ. ದಯಮಾಡಿ ಇದನ್ನು ಮುಂದುವರೆಸಬೇಕು. ಆದಷ್ಟು ಬೇಗ ಈ ಶಾಸನ ಸಭೆ,

ಆ ಶಾಸನವನ್ನು ಅನುಷ್ಠಾನಗೊಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇವೆ. ಮಾನ್ಯ ರಾಜ್ಯಪಾಲರ ಭಾಷಣದ 5ನೇ ಪ್ಯಾರಾದಲ್ಲಿ ಈ ರೀತಿ ಹೇಳಲಾಗಿದೆ.

" 5. ಸಾಮಾಜಿಕ ಸೇವೆಗೆ ಇರುವ ನೂರಾರು ದಾರಿಗಳಲ್ಲಿ ರಾಜಕೀಯವೂ ಒಂದು ಎಂದು ನಾನುಬಲವಾಗಿ ನಂಬಿದ್ದೇನೆ. ರಾಜಕೀಯ ಅಧಿಕಾರವನ್ನು ಬಳಸಿಕೊಂಡು ಸಮಾಜದಲ್ಲಿರುವ ಬಡವರಿಗೆಘೋಷಣೆ, ನಿರ್ಗತಿಕರಿಗೆ ಆಸರೆ, ಅಶಕ್ತರಿಗೆ ರಕ್ಷಣೆ..."

ಮುಂದುವರೆದು ಇನ್ನೂ ಏನೇನೋ ಹೇಳಿದ್ದಾರೆ. ಸಮಾಜ ಸೇವೆ, ಚುನಾವಣಾ ಕ್ಷೇತ್ರ, ರಾಜಕೀಯ ಪಕ್ಷಗಳು ಇವೆಲ್ಲದರ ಬಗ್ಗೆ ಎರಡು ನಿಮಿಷ ಮಾತನಾಡಿಕೊಳ್ಳೋಣ. ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಯಾರು ಅತ್ಯಂತ ಬಡವ but ಪ್ರಾಮಾಣಿಕರಾಗಿದ್ದರೋ, ಅಂತಹವರು ಪಾರ್ಟಿಯ Treasurer ಆಗಿರುತ್ತಿದ್ದರು. ಆದರೆ ಕಾಲ ಬದಲಾಗಿ ಬಿಟ್ಟಿದೆ. ಈಗ Treasurer ಆಗಿರಬೇಕಾಗಿದ್ದರೆ ಅನುಕೂಲಸ್ಥರೇ ಆಗಬೇಕಾಗಿದೆ. ಮಾನ್ಯ ಕುಮಾರಸ್ವಾಮಿಯವರನ್ನು ಅಥವಾ ಬಿಜೆಪಿ ಯವರನ್ನು ದೂಷಣೆ ಮಾಡಲಿಕ್ಕೆ ನಾನು ತಯಾರಾಗಿಲ್ಲ. Let the charity begin at home. ತಮಗೆ ಗೊತ್ತಿದೆ, ತಾವು ರಾಜಕಾರಣವನ್ನು ಹೇಗೆ ಪ್ರಾರಂಭ ಮಾಡಿದಿರಿ? ಹೋರಾಟದ ಹಾದಿಯಲ್ಲಿ ನಡೆದುಕೊಂಡು ಬರುತ್ತಾ, ಅಕಸ್ಮಾತ್ತಾಗಿ ನಿಮಗೆ ವಿಧಾನಸಭೆ ಸಿಕ್ಕಿದೆ. ನೀವು ವಿಧಾನಸಭೆಗೆ ಬರುವುದಕ್ಕೋಸ್ಕರವೇ ಹೋರಾಟ ಪ್ರಾರಂಭ ಮಾಡಿದವರಲ್ಲ. ಈಗ ಹೋರಾಟ ಪ್ರಾರಂಭವಾಗುವುದೇ ಇಲ್ಲಿಗೆ ಬರುವುದಕ್ಕೆ, ಅಂತ್ಯ ಆಗುವುದೂ ಇಲ್ಲಿಗೆ ಬಂದು ಹೋಗುವುದಕ್ಕೆ ಆಗಿದೆ. ವಿಶೇಷವಾಗಿ ಇಲ್ಲಿಯ ಜಾಗತೀಕರಣ, ಅದರ ಪರಿಣಾಮವಾಗಿ ಭೂಮಿಗೆ ವಿಪರೀತವಾದಂತಹ ಬೆಲೆ ಬಂತು. ಈ ಭೂಮಿ ದಂಧೆಯಲ್ಲಿ ಕೆಲವರು ರಾತ್ರೋರಾತ್ರಿ ಹಣ ಮಾಡಿದರು. ಅವರಿಗೆ neo rich ಎಂದು ಕರೆಯುತ್ತೇವೆ. 'ನವ್ಯ ಶ್ರೀಮಂತರು' ಎಂದೂ ಕರೆಯುತ್ತೇವೆ. ರಾಜಕೀಯ ಅಧಿಕಾರಕ್ಕೆ ಬಹಳ ಮಹತ್ವ ಇದೆ, ನಾವು ಈ ದಂಧೆ ಚೆನ್ನಾಗಿ ನಡೆಸಬೇಕಾಗಿದ್ದರೆ, ರಾಜಕೀಯ ಅಧಿಕಾರವೂ ನಮ್ಮ ಕೈಯ್ಯಲ್ಲಿ ಇದ್ದರೆ ಸುಲಭವಾಗುತ್ತದೆ ಎಂದು ಅವರಿಗೆ ಅರಿವಾಯಿತು. ಎಷ್ಟು ದಿವಸಗಳವರೆಗೆ ಇವರಿಗೆ ಅವರಿಗೆ ಚಿಲ್ಲರೆ

contributions ಕೊಟ್ಟುಕೊಂಡು ಇರುವುದು? ನಾವೇ ನೇರವಾಗಿ ರಂಗ ಪ್ರವೇಶ ಮಾಡಿದರೆ ಹೇಗೆ ಇರುತ್ತದೆ?...

ಶ್ರೀ ಜೆ.ಟಿ.ಪಾಟೀಲ್ (ಬೀಳಗಿ) :– ಸರ್, ಒಂದೇ ನಿಮಿಷ. ಸನ್ಮಾನ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಏನು ಮಾತನಾಡಲಿಕ್ಕೆ ಏನು ಮಾತನಾಡಲ್ಲಿಕ್ಕೆ ಪ್ರಸ್ತಾಪಿಸಿದ್ದಾರೆ, ಅದರ ಸಂಪೂರ್ಣ ಕಹಿ ಅನಿಭವವನ್ನು ನನ್ನ ಕ್ಷೇತ್ರ ಉಂಡಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಈ de-notification,ಅದರ ಏನೇನು ಕಹಿ ಅನುಭವಗಳು ಇದೆಯೋ, ಅದರ ಫಲಾನುಭವಿಗಳು ನಮ್ಮ ಬೀಳಗಿ ಕ್ಷೇತ್ರದವರು ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ :– ನಾನು ಯಾರೊಬ್ಬರನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದಿಲ್ಲ, ಮಾತನಾಡುವುದಕ್ಕೆ ಆಗುವುದೂ ಇಲ್ಲ. ನಾನು ಹೇಳಿದಾಗ ಯಾರ್ಯಾರಿಗೆ ಅನ್ವಯಿಸಬೇಕೋ, ಅವರಿಗೆಲ್ಲಾ ಅರ್ಥವಾದರೆ ನನ್ನ ಮಾತುಪರಿಣಾಮವಾಗಿದೆ ಎಂದು ಸಂತೋಷ ಪಡುತ್ತೇನೆ. ಇದು ಬರು ಬರುತ್ತಾ ಎಲ್ಲಿಗೆ ಹೋಗಿ ಬಿಟ್ಟಿದೆ ಎಂದರೆ, ನಾವು ಮತ್ತು ನೀವು, ರಾಜಕೀಯ ಕ್ಷೇತ್ರ ಬಿಟ್ಟು ಓಡಿ ಹೋಗುವಂತೆಯೂ ಇಲ್ಲ, ಚುನಾವಣೆಗೆ ನಿಲ್ಲುತ್ತೇವೆಂದು ಧೈರ್ಯವಾಗಿ ಹೇಳುವಂತೆಯೂ ಇಲ್ಲ. ಒಬ್ಬ ಅಭ್ಯರ್ಥಿಯನ್ನು ನಿಲ್ಲಿಸಬೇಕಾಗಿದ್ದರೆ ನಾವು ಒಬ್ಬ ವ್ಯಕ್ತಿಯಲ್ಲಿ ಏನುಗಮನಿಸುತ್ತಿದ್ದೆವು? ಅದು ಹೋಗಿ pass bookಗಳನ್ನು ಕೇಳುವಂತಹ ಸನ್ನಿವೇಶಕ್ಕೆ ಬಂದು ಬಿಟ್ಟಿದ್ದೇವೆ. ಸ್ವಲ್ಪ ಹೆಚ್ಚು ಕಡಿಮೆ ಜನ ಕೂಡ, ನಮ್ಮ ದೌರ್ಭಾಗ್ಯ, ನಮ್ಮ ಭಾಷಣವನ್ನೂ ಕೇಳುವುದಿಲ್ಲ, ನಮ್ಮ ಪಾಂಪ್ಲೆಟ್ಟೂ ನೋಡುವುದಿಲ್ಲ, ನಮ್ಮ ಪ್ರಣಾಳಿಕೆಯನ್ನೂ ಓದುವುದಿಲ್ಲ. ಹೋದ ತಕ್ಷಣ ಏನು ತಂದಿದ್ದೀಯಾ? ಎಂದು ನಮ್ಮ ಕೈಯನ್ನು ನೋಡುತ್ತಾರೆ. ಪಾಪ! ಅವರನ್ನು ದೂಷಣೆ ಮಾಡುವಂತೆಯೂ ಇಲ್ಲ. ಆ ಚುನಾವಣೆಯಲ್ಲಿ ನಡೆಸುವ ಕಸರತ್ತು ಇದೆಯಲ್ಲಾ, ಅದು ಯಾರಿಗೂ ಬೇಡ. ಆ ಒಂದು ತಿಂಗಳು ಅನುಭವಿಸುವ ಹಿಂಸೆ ನಮ್ಮ ಪರಮಶತ್ರುಗಳಿಗೂ ಬೇಡ. ಯಾವ್ಯವ ತರಹ ನೀವು ಮಾಡಿದರೂ ಕೂಡ ಅವರನ್ನು face ಮಾಡುವುದಕ್ಕಾಗುವುದಿಲ್ಲ. ಈ 'ಸಾಮಾಜಿಕ ಸೇವೆ' ಎಂದರೆ ಏನು? ನನಗೆ ಅರ್ಥವೇ ಆಗುವುದಿಲ್ಲ. ಇದರಲ್ಲಿ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಹೋದ್ಯೋಗಿಗಳು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಆಗಾಗ್ಗೆ ಬೇಸರದಲ್ಲಿ ಕೆಲವು ಸಲ ಮಾತನಾಡುವುದನ್ನು

ನಾನು ನೋಡಿದ್ದೇನೆ. ಬಹುಶಃ ಆ ಹಿನ್ನೆಲೆಯೊಂದಲೇ ಈ ಮಾತುಗಳು ಬಂದಿರಬೇಕು ಎನಿಸುತ್ತದೆ. ಆದರೆ, ನಾವು ಅಸಹಾಯಕರಾಗಬೇಕೇ? ಇದಕ್ಕೆ ಕಡಿವಾಣ ಹಾಕುವುದಕ್ಕೆ ನಮಗೆ ಬರುವುದಿಲ್ಲವೇ? ಎಲ್ಲೋ ಒಂದು ಕಡೆಗೆ ನಾವು ದೃಢ ಮನಸ್ಸು ಮಾಡದೆ ಹೋದರೆ, ಮುಂದಿನ ಗತಿಯೇನು? ಇವತ್ತು ಇಲ್ಲಿರತಕ್ಕ ರಾಜಕೀಯ ವ್ಯವಸ್ಥೆಯೇ ಮೊದಲಿನಿಂದ ಸ್ಥಾಪನೆ ಆಗಿಬಿಟ್ಟಿದ್ದರೆ, ಮಾನ್ಯ ನೆಹರೂರವರು Prime Mininster ಆಗುವುದಕ್ಕೆ ಆಗುತ್ತಲೇ ಇರಲಿಲ್ಲ.

ನೆಹರೂ ಅವರು ಪ್ರಧಾನಮಂತ್ರಿಗಳಾಗುವುದಕ್ಕೆ ಆಗುತ್ತಲೇ ಇರಲಿಲ್ಲ, ಬಿರ್ಲಾನೊ, ಡಾಲ್ಮಿಯಾನೊ ಯಾರಾದರು ಆಗಿ ಹೋಗಿರುತ್ತಿದ್ದರು, ದುಡ್ಡು ಅಷ್ಟೇ ಅಲ್ವಾ ಮುಖ್ಯ! ಬಹಳ ನೋವಿನ ಸಂಗತಿ, ಅವರು ತಪ್ಪಿತಸ್ಥರೆಂದು ಹೇಳುವುದಿಲ್ಲ. ರಾಜ್ಯಸಭೆ, ಇಂಥ ಪರಮೋಚ್ಚ ಸ್ಥಾನಗಳಿಗೆ ಹೋಗಬೇಕಾಗಿದ್ದರೆ ಹುಡುಕಿ, ಅವರನ್ನು ಪ್ರಯಾಸಪಟ್ಟು ಒಪ್ಪಿಸಿ, ಏಕೆಂದರೆ, ಅವರು ಒಪ್ಪುತ್ತಿರಲಿಲ್ಲ, ಗೌರವಸ್ಥರನ್ನು ಕರೆದುಕೊಂಡು ಬಂದು ರಾಜ್ಯಸಭೆಗೆ ಕಳುಹಿಸುತ್ತಿದ್ದರು. 2013, ಈ ವರ್ಷ ನಮಗೆ ಟರ್ಮ್ ಇಲ್ಲ, 2014ಕ್ಕೆ ಸುಗ್ಗಿ ಬರುತ್ತದೆ. Where to where? ನಡೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ, ಸುತ್ತಿ ಬಳಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲವೆಂದು ಈಜಿ ಈ ದಡದಿಂದ ಆ ದಡಕ್ಕೆ ಹೋಗಿ ಶಾಲೆಯಲ್ಲಿ ಕಲಿತಂಥವರಾದ ಲಾಲ್‌ಬಹದ್ದೂರ್ ಶಾಸ್ತ್ರಿ ಈ ದೇಧಶದ ಪ್ರಧಾನಮಂತ್ರಿಗಳಾಗುತ್ತಾರೆ. ಅಲ್ಲಿಂದ ಇಲ್ಲಿಗೆ ನಮ್ಮ ಸ್ಥಿತಿ ಒಂದು ತಲುಪಿದೆ. ಯಾವುದೇ ಒಂದು ದೇಶ ತನ್ನ ಪಯಣದ ಅವಧಿಯಲ್ಲಿ ಪ್ರಗತಿಯ ಮಾರ್ಗ ಹುಡುಕಬೇಕೇ ಹೊರತು ಅವನತಿಯ ಮಾರ್ಗ ಹಿಡಿಯಬಾರದು. ಬಹಳ ದು:ಖದ ಸಂಗತಿ. ನಾನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ, ಯಾವೊಬ್ಬ ವ್ಯಕ್ತಿಯನ್ನು ಅಥವಾ ಸಂಸ್ಥೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ನಾವು 1978ರಲ್ಲಿ ಮೊದಲನೇ ಸಾರಿ ಈ ಮನೆಗೆ ಆಯ್ಕೆಯಾಗಿ ಬಂದಾಗ ಬಹುಶಃ ಇಂಥ ವಾತಾವರಣ ಇದ್ದಿದ್ದರೆ ನಾವು ಪಂಚಾಯತಿಗೇ ಆರಿಸಿ ಬರುತ್ತಿರಲಿಲ್ಲ.I think, ನಾವೆಲ್ಲರೂ ಕೂಡ ಸಾಮೂಹಿಕವಾಗಿ ಈ ದಿಕ್ಕಿನಲ್ಲಿ ಆಲೋಚನೆ ಮಾಡಬೇಕಾಗಿದೆ.

ಅಧ್ಯಕ್ಷರು : ಅದಕ್ಕೆ ಲೋಹಿಯಾರವರು, ನಿರಾಶಾ ಕೀ ಕರ್ತವ್ಯ ಎಂದು ಹೇಳಿದರು.

ಶ್ರೀ ಕೆ.ಆರ್.ರಮೇಶ್ ಕುಮಾರ್ :– ಅಧ್ಯಕ್ಷರೆ, ಹೌದು, ಲೋಹಿಯಾರವರು ಇನ್ನೂ ಕೆಲವು ಮಾತುಗಳನ್ನು ಹೇಳಿದ್ದಾರೆ, ಲೋಹಿಯಾಯಿಗಳ ಅನುಭವ ಕೂಡ ನಮಗೇನು ಅಷ್ಟು ಖುಷಿ ತಂದಿಲ್ಲ. ಅದು ಕೂಡ ಕೆಲವು ಸಮಯ ತೊಂದರೆಯನ್ನು ಕೊಟ್ಟಿದೆ. ಮೊನ್ನೆ ಹೌಸ್‌ನಲ್ಲಿ, ಅರಣ್ಯದಲ್ಲಿ ಪರಂಪರಾಗತವಾಗಿ ವಾಸ ಮಾಡತಕ್ಕಂಥವರನ್ನು ಒಕ್ಕಲೆಬ್ಬಿಸುವ ವಿಚಾರ ಬಂತು. ಅದಕ್ಕೆ ಒಕ್ಕೊರಲಿನಿಂದ ಸದನದ ಎಲ್ಲಾ ಕಡೆಯ ಜನ ಅದು ಕೂಡದು ಎಂದರು. ಪ್ಯಾರ 7ರಲ್ಲಿ ಆ ವಿಚಾರವನ್ನು ಸರ್ಕಾರ ಪ್ರಸ್ತಾಪ ಮಾಡಿದೆ. ಬಹಳ ಜನರು ಮಾತನಾಡುತ್ತಿದ್ದರು ಮಧ್ಯದಲ್ಲಿ ನಾನು intervene ಆಗುವುದು ಬೇಡವೆಂದು ಸುಮ್ಮನಿದ್ದೆ. Forest Conservation Avt ಬಂದಿದ್ದು 1970ರಲ್ಲಿ, Forest Conservation Avt ಗೆ ನಾವು ಯಾರೂ ವಿರುದ್ಧವಿಲ್ಲ. ದೇಶದಲ್ಲಿರುವ ಅರಣ್ಯ ಪ್ರದೇಶದ ಪ್ರಮಾಣ ಕಡಿಮೆಯಾಗಿದೆ, ಅದನ್ನು ಹೆಚ್ಚು ಮಾಡಬೇಕು, ಇದರ ಬಗ್ಗೆ ಪ್ರತ್ಯೇಕವಾಗಿ ಬೇಕಾದರೆ ಇನ್ನೊಂದು ದಿವಸ ಚರ್ಚೆ ಮಾಡೋಣ ಆದರೆ ಈ ಅರಣ್ಯ ಇಲಾಖೆಯ ಸ್ವರೂಪವೇನು? ಎಷ್ಟು ಜನ IFS ಅಧಿಕಾರಿಗಳು? ಸಂಬಳಸಾರಿಗೆ ಖರ್ಚಿಗಾಗಿ ವರ್ಷಕ್ಕೆ ಇವರಿಗೆ ಕೊಡತಕ್ಕಂಥ ಅನುದಾನವೆಷ್ಟು? ಕಳೆದ 60 ವರ್ಷಗಳಲ್ಲಿ ಇವರು ಬೆಳೆಸಿದಂಥ ಕಾಡು ಎಷ್ಟು? ತೆಗೆದ ಕಾಡು ಎಷ್ಟು? ಈ ಸೌಭಾಗ್ಯಕ್ಕೆ ಇವರು ಇರಬೇಕಾ? ಯಾರಾದರು ಪಾರ್ಟಿಗಳು ಮನೆಯ ಹಿಂಭಾಗದಲ್ಲಿ ಮರವಿದ್ದು ಅದನ್ನು ತೆಗೆಯುವುದಕ್ಕೆ ಪರ್ಮಿಟ್‌ಕೇಳುವುದಕ್ಕೆ ಹೋದರೆ ಅವನು ಹೋಗಿ ಅವನ ಮಗ, ಮೊಮ್ಮಗ ಬರಬೇಕಾಗುತ್ತದೆ. ಬೋಪಯ್ಯನವರೆ, Am I right? ಕಾನೂನನ್ನು ಗೌರವಿಸುವ ಜನ ಇವರಿಗೆ ಸುಲಭದಲ್ಲಿ ಸಿಗುತ್ತಾರೆ. ಕಾನೂನನ್ನು ಕಿತ್ತು ಗಾಳಿಪಟ ಮಾಡಿ ತಮ್ಮ ಖುಷಿ ಬಂದಂತೆ ಮಾಡಿದವರ ಸುದ್ದಿಗೆ ಇವರು ಹೋಗುವುದಿಲ್ಲ. ಈ ಜನ ಇವತ್ತು ನಿನ್ನೆ ಹೋದರೇ? ನಾವೊಂದು ಪದ ಬಳಸಿದ್ದೇವೆ, ಪರಂಪರಾನುಗತವಾಗಿ ಇವರು ಅಲ್ಲೇ ವಾಸ ಮಾಡತಕ್ಕಂಥವರು, ಅವರಿಗೆ ಬೇರೆ ಗೊತ್ತೇ ಇಲ್ಲ. ಯಾವ ಶಾಸನವೂ ಕೂಡ ನಿರ್ದಯಿಯಾಗಿ ಅಷ್ಟು ಕಠಿಣವಾಗಿ ಅವರನ್ನು ಹೊರಕ್ಕೆ ಹಾಕಿರೆನ್ನುವುದು ಇರಲಿಲ್ಲ. Misinterpretation of law. ಸರ್ಕಾರವೇ ಮುಂದೆ ಬಂದಿದೆ. ಅನುಭವ, ಚಿಕ್ಕವಯಸ್ಸಿನಲ್ಲಿ ಕುಮಾರಸ್ವಾಮಿ–ಯವರು ಮುಖ್ಯಮಂತ್ರಿಯಾದರು. ಆ ಉದ್ವೇಗ, ಉತ್ಸಾಹದಲ್ಲಿ ಕೆಲವು ಒಳ್ಳೆ

ಕೆಲಸಗಳನ್ನು ಮಾಡಿದ್ದಾರೆ, ಬಹುಶಃ ಕೆಲವು ಮಾಡಬೇಕೆಂದು ಇದ್ದಿದ್ದಕ್ಕೆ ಅವಕಾಶ ಸಿಗದೆ ಹೋಗಿರಬಹುದು. ಆದರೆ ಅನುಭವ ಏನಿದೆ, ಜನ ಹೇಗೆ ನಡೆದುಕೊಳ್ಳುತ್ತಾರೆ, ಸ್ನೇಹಿತರು ಹೇಗೆ ನಡೆದುಕೊಳ್ಳುತ್ತಾರೆ, ಸಂಬಂಧಿಕರು ಹೇಗೆ ನಡೆದುಕೊಳ್ಳುತ್ತಾರೆ, ಆಫೀಸರ್ಸ್ ಹೇಗೆ ನಡೆದುಕೊಳ್ಳುತ್ತಾರೆ, ಇದರಲ್ಲೆ ಏನಿದೆ ಎನ್ನುವುದು ಒಂದೊಂದು ದಿವಸ ಕಳೆದಂತೆಲ್ಲಾ ಮನುಷ್ಯ ಗಟ್ಟಿಯಾಗಿಬಿಡುತ್ತಾನೆ. ಅದಕ್ಕೆ ಅನುಭವವೆನ್ನುವುದು, ಆ ವಯಸ್ಸು ಕಳೆದ ಮೇಲೆ ಎಲ್ಲೋ ಒಂದು ಕಡೆಗೆ ಸತ್ಯಕ್ಕೆ ಸಮೀಪವಾಗುತ್ತೇವೆ. ಬಹುಶಃ ಸಿದ್ದರಾಮಣ್ಣನವರಿಗೆ, something like that reserved in his mind. Usual ಆಗಿ ಯಾರೂ ಸರ್ಕಾರದಲ್ಲಿ ಈ ರೀತಿಯ commitment ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದೆಲ್ಲವೂ ಕೂಡ ಐತಿಹಾಸಿಕವಾಗಿ ಉಳಿದು-ಬಿಡುತ್ತದೆ. ನಾನು ಸಾಧ್ಯವಾದಷ್ಟು ಇತಿಮಿತಿಯಲ್ಲೆ ಇದ್ದುಬಿಡುತ್ತೇನೆ. ಏಕೆಂದರೆ, ಅವರು ಮುಖ್ಯಮಂತ್ರಿಗಳಾದ್ದರಿಂದ ಅಗತ್ಯಕ್ಕಿಂತ ಹೆಚ್ಚು ಗುಣವಾಚಕಗಳನ್ನು, ಪದಗಳನ್ನು ಬಳಸಿದರೆ ಬೆಣ್ಣೆ ಸವರುತ್ತಿದಾರೆಂದು ತಿಳಿದುಕೊಳ್ಳುಬಹುದು. ನನ್ನ ಹತ್ತಿರ ಬೆಣ್ಣೆ ಬಿಸಿನೆಸ್ ಇಲ್ಲ. ಆದರೆ ಬಹಳ ಒಳ್ಳೆ ಕೆಲಸವಿದೆ, ಇಡೀ ಸದನ ಅವರ ಒಟ್ಟಿಗೆ ಇರುತ್ತದೆ. ಇದನ್ನು ಮಾಡಿ ತೀರಬೇಕು ದಯಮಾಡಿ, ಕಾನೂನನ್ನು ಅರ್ಥಮಾಡಿಕೊಂಡು ಜೀರ್ಣಿಸಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದೆ, ಬಡವರ ವಿರೋಧಿಗಳಾಗಿರುವಂಥವರು ಬಂದು ಹೇಳತಕ್ಕಂಥ ಮಾತುಗಳಿಗೆ ಲಕ್ಷ್ಯ ಕೊಡದೆ ಈ ಜನರ ಬದುಕಿಗೆ ನೆಮ್ಮದಿ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಮೊನ್ನೆ, casual ಆಗಿ ಒಂದು ಮಾತನ್ನು ಹೇಳಿದರು. ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಮಾತನಾಡುತ್ತಾ ಕ್ರಿಶ್ಚಿಯನ್ ಅಥವಾ minor community ಗೆ ಸೇರಿದವರಿಗೆ ಗೃಹ ಖಾತೆಯನ್ನು ಕೊಟ್ಟಿದ್ದೇವೆ, ಹಾಗಾದರೆ ಒಂದೊಂದು ಸಮಾಜಕ್ಕೆ ಗೃಹ ಸಚಿವರನ್ನು ಮಾಡುತ್ತೀರಾ ಎಂದು ಹೇಳಿದರು. Probably, misunderstanding ಇರಬಾರದು. Pluralism, ಈ ದೇಶದ Constitution ನ preamble ನಲ್ಲೆ ಬಹಳ ಸ್ಪಷ್ಟವಾಗಿ ಹೇಳಿದೆ, ಎಲ್ಲರನ್ನೂ ಸಮಾನವಾಗಿ ಕಾರಣಕ್ಕಂಥದ್ದು, ಸಮಾನರಾಗಿ ಕಾಣುತ್ತಿದೇವೆ ಎನ್ನು ಧೈರ್ಯವನ್ನೂ ಕೂಡ ಅವರಲ್ಲಿ ತುಂಬ ಬೇಕಾಗುತ್ತದೆ. ಹಿಂದೆ ನಡೆದಂಥ ಕೆಲವು ಘಟನೆಗಳ ಕಾರಣದಿಂದ ನಿಜವಾಗಿಯೂ ಕೆಲವು

ವರ್ಗದ ಜನರಿಗೆ ಭದ್ರತೆಯ ಕಲ್ಪನೆ ಹೊರಟುಹೋಯಿತು. Sense of insecurity set in ಆಯಿತು. ಕಾರಣ ಇಷ್ಟೆ, ಒಬ್ಬ private citizen ಕಾನೂನನ್ನು ತನ್ನ ಕೈಗೆ ಎತ್ತಿಕೊಂಡು ತಾನೇ ಕಾನೂನನ್ನು ಅನುಷ್ಠಾನಗೊಳಿಸುವನಾದಾಗ, ತಪ್ಪಿತಸ್ಥರ ಮೇಲೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳಬೇಕಾದ ಪೊಲೀಸ್ ಅಧಿಕಾರಿ ನಿಷ್ಕ್ರಿಯನಾದಾಗ ಈ ಹೊಡೆತಕ್ಕೆ ಸಿಕ್ಕಿದಂಥ ದೌರ್ಭಾಗ್ಯದ ಮನುಷ್ಯ ಎಲ್ಲಿಗೆ ಹೋಗಬೇಕ ಯಾರಲ್ಲಿ ಹೋಗಿ ಅವನು ನೆರವು ಕೇಳಬೇಕು? ಸಾಂಕೇತಿಕವಾಗಿ ಇದರಲ್ಲಿ ಮಾನ್ಯ ಜಾರ್ಜ್‌ರವರು Home Minister ಆಗಿಬಿಟ್ಟರು ಎಂದು ಅವರೆಲ್ಲ ನೆಮ್ಮದಿ ಆಗಿ ಬಿಟ್ಟರು ಎಂದು ಅಲ್ಲ. ಒಂದು Notional satisfaction ಅಷ್ಟೆ. ಅಷ್ಟಕ್ಕೆ ನಮಗೆ ಹೃದಯವಂತಿಕೆ ಇದ್ದರೆ ಒಳ್ಳೆಯದು ಎನ್ನತಕ್ಕಂಥಹ ಮಾತನ್ನು ನಾನು ಹೇಳುತ್ತೇನೆ. Waiver of loans ಬಗ್ಗೆ ಪ್ಯಾರಾ–7ರಲ್ಲಿ ಹೇಳಿದ್ದಾರೆ. ಈ ಸದಸದಲ್ಲಿ ಯಾರೂ ಕಡಿಮೆ ರೇಟ್‌ಗೆ ಅಕ್ಕಿ ಕೊಡುವುದು ಅಥವಾ waiver of loans ಬಗ್ಗೆ ಟೀಕೆ ಮಾಡಲಿಲ್ಲ. ಎಲ್ಲರೂ ಸಹ welcome ಮಾಡಿದ್ದಾರೆ. ಆದರೆ ಕೆಲವರು ಕೆಲವು ವಿಚಾರಗಳನ್ನು ಹೇಳುತ್ತಾ ತಮ್ಮ ಅನುಮಾನಗಳನ್ನು ವ್ಯಕ್ತಪಡಿಸುತ್ತಾ ಸರ್ಕಾರ ಅಥವಾ ಮಾನ್ಯ ಮುಖ್ಯಮಂತ್ರಿಗಳು ಅತ್ಯುತ್ಸಾಹದಲ್ಲಿ ಇದ್ದರೇನೋ, ಆಲೋಚನೆ ಮಾಡದೆ ನಿರ್ಣಯ ತೆಗೆದುಕೊಂಡರೇನೋ, ಎಷ್ಟು ದೊಡ್ಡ ಹೊರೆ, ಮೀಡಿಯಾದಲ್ಲಿ ವಿಶೇಷವಾಗಿ Electronic Media ಇನ್ನೇನು treasury ಖಾಲಿ ಆಗಿ ಹೋಯಿತು, ಅಲ್ಲಿ ಹೋಗಿ ಹುಡುಕಾಡಿದರೂ ಮೂರು ಕಾಸು ಸಿಗುವುದಿಲ್ಲ, ಈ ಜನ ಎಲ್ಲ ಸೋಮಾರಿಗಳು ಆಗಿ ಬಿಟ್ಟರು ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. Karnataka State Finance Corporation ನಮ್ಮ ರಾಜ್ಯ ಸರ್ಕಾರದ ಒಂದು undertaking. ಇದು ಸ್ಥಾಪನೆ ಆದ ದಿವಸದಿಂದ ಇವತ್ತಿನವರೆಗೆ ಲೋನ್ ಕೊಟ್ಟಿರತಕ್ಕಂಥದ್ದು 1,65,128 ಜನರಿಗೆ. ಹಣ ಎಷ್ಟು ಗೊತ್ತಾ? 11,282 ಕೋಟಿ ರೂಪಾಯಿಗಳು. 1,65,128 ಜನರಿಗೆ 11,282 ಕೋಟಿ ರೂ. ಸಾಲ ಕೊಟ್ಟಿದೆ. ಹೌದು ಕೈಗಾರಿಕೆಗಳು ಮಾಡಬೇಕು, ಸ್ವಂತ ಜೀವನ ಮಾಡಬೇಕು, entrepreneur. Its all right. Nothing wrong. ಅವರದೇ ಒಪ್ಪಿಗೆ ಪ್ರಕಾರ ವಸೂಲಿ ಮಾಡುವುದಕ್ಕಾಗುವುದಿಲ್ಲವೆಂದು ಅವರು ವೇವ್ ಆಫ್‌ಮಾಡಿರುವುದು 40

ಕೋಟಿ ರೂ. ರೆಕವರಿನೇ ಮಾಡುವುದಕ್ಕಾಗುವುದಿಲ್ಲ, doubtful cases, blocked debts ನಲ್ಲಿ ಇಟ್ಟುಕೊಂಡಿರತಕ್ಕಂಥದ್ದು 160 ಕೋಟಿ. ಒಂದು 160, ಒಂದು 40, ಒಟ್ಟು 200 ಕೋಟಿ ರೂ ಏನಿದು 200 ಕೋಟಿ? ಟ್ರೆಜರಿಗೆ ಏನೂ ಲಾಸ್ ಆಗುವುದಿಲ್ಲ, ಏಕೆಂದರೆ ಅವರು ದೊಡ್ಡ ದೊಡ್ಡವರು ಏನೋ ಮಾಡಬೇಕು, ಕಾರ್ಖಾನೆ ಮಾಡಬೇಕು, ಇನ್ನು ಯಾವುದೋ ವ್ಯಾಪಾರ ಮಾಡಬೇಕೆಂದು ತೆಗೆದುಕೊಂಡಿರುತ್ತಾರೆ. ಲಾಸ್ ಆಗಿರುತ್ತದೆ. ಎಲ್ಲಿಂದ ತಂದು ಕಟ್ಟುವುದಕ್ಕಾಗುತ್ತದೆ? ಅವರದು ಏನೂ ತಪ್ಪಿಲ್ಲ. KSIIDC, Karnataka State Industrial Investment Development Corporation. ಅವರದು ಏನೂ ಹೆಚ್ಚಿಗೆ ಇಲ್ಲ. ಅವರೇ ಒಪ್ಪಿಕೊಳ್ಳುವ ಪ್ರಕಾರ 400 ಕೋಟಿ ರೂ. ಇದು 200ಕೋಟಿ, ಅದು ಒಂದು 400 ಕೊಟಿ, ಸುಮ್ಮನೆ just examples ಕೊಡುತ್ತಿದ್ದೇನೆ. Bank Employees Union ನವರು ಒಂದು bulletin ಹೊರಡಿಸುತ್ತಾರೆ. ಪ್ರತಿ ಪಕ್ಷದ ನಾಯಕರೇ, 2007ರಲ್ಲಿ ಅವರು ಹೇಳಿಕೆ ಕೊಟ್ಟಿರುವ ಪ್ರಕಾರ 1.5 ಲಕ್ಷ ಕೋಟಿ ರೂಪಾಯಿಗಳ ಹಣ ಬ್ಯಾಂಕಿನವರೆ waive off ಮಾಡಿ ಬಿಟ್ಟಿದ್ದಾರೆ. ಬ್ಯಾಂಕಿನಲ್ಲಿ ದುಡ್ಡು ಕುಬೇರೆ ದೇವಲೋಕದಿಂದ ತಂದು ಇಟ್ಟು ಹೋಗುತ್ತಾನಾ? ಬ್ಯಾಂಕಿನಲ್ಲಿ ಇರುವ ಹಣ ನಮ್ಮದು, ನಿಮ್ಮದು ಅಲ್ಲವಾ? ಸಾರ್ವಜನಿಕರ ಹಣ ಅಲ್ಲವಾ? 1.5 ಲಕ್ಷ ಕೋಟಿ ಹಣ ವಜಾ ಮಾಡುತ್ತಾರೆ! ಇದರಲ್ಲಿ 40% ಜನ ಒಂದು ಕೋಟಿಗಿಂತ ಮೇಲೆ ಸಾಲ ತೆಗೆದುಕೊಂಡಿರುವವರು. Non – performing assets 800 ರೂ. ಕೋಟಿ. ಮೊನ್ನೆ ಎಲ್ಲೋ ಪೇಪರ್‌ನಲ್ಲಿ ಓದುತ್ತಿದ್ದೆ, King Fisher ಸಂಸ್ಥೆಗೆ 2500 ಕೋಟಿ ರೂ. ಬ್ಯಾಂಕಿನವರೇ ಗ್ಯಾರಂಟಿ ಕೊಡುತ್ತಾರೆ. ನನಗೆ ಕೋಟಿಗಳೆಂದರೆ ಭಯ, ಅದರಲ್ಲಿಯೂ ಜಾಸ್ತಿ ಹೇಳಬೇಕೆಂದರೆ ಇನ್ನೂ ಭಯ ಆಗುತ್ತದೆ. ಈಗ ಅಕ್ಕಿಗೆ ಬರುತ್ತೇನೆ. ನನಗೆ ತೋಳ್ಬಲ ಬಿಟ್ಟರೆ ದುಡಿಯುವುದು ಬಿಟ್ಟರೆ ಬೇರೆ ಏನೂ ಮಾರ್ಗ ಇಲ್ಲ. ಬೆಳಗ್ಗಿನಿಂದ ರಾತ್ರಿವರೆಗೆ ನಾನು ಹೋಗಿ ಜಮೀನಿನಲ್ಲಿ ದುಡಿಯುತ್ತೇನೆ ಅಥವಾ ಎಲ್ಲೋ ಒಂದು ಕಡೆ ಕೆಲಸ ಮಾಡುತ್ತೇನೆ. ನನಗೆ ದ್ರವ್ಯದ ರೂಪದಲ್ಲಿ ನನ್ನ ಕೂಲಿಗೆ ಏನು ಹಣ ಬರುತ್ತದೆ. ನಾನು man – power investment ಮಾಡಿದ್ದಕ್ಕೆ ಬರುವ ಆ ಹಣಕ್ಕೆ ಅಕ್ಕಿ ಕೊಳ್ಳೋ purchasing powerಇಲ್ಲ. ನನಗೆ ಶರೀರದ ಶ್ರಮ ಹಾಕುವುದು

ಬಿಟ್ಟರೆ ಏನೂ ಗತಿ ಇಲ್ಲ ನನ್ನ ಹತ್ತಿರ. ಎಷ್ಟು ಹೊತ್ತು ಹೇಳಿದರೂ ಕೆಲಸ ಮಾಡುತ್ತೇನೆ. ನಾನು ದುಡಿದು ಸಾಯಂಕಾಲ ನೀವು ಕೊಟ್ಟಿದ್ದು ತೆಗೆದುಕೊಂಡುಹೋಗಿ ಅಂಗಡಿಗೆ ಕೊಟ್ಟರೆ, ನಾನು ನನ್ನ ಮನೆಯವರು ಹೊಟ್ಟೆ ತುಂಬಾ ತಿನ್ನುವುದಕ್ಕಾಗುವುದಿಲ್ಲ. Article 14ಏನು ಹೇಳುತ್ತದೆ? Article 26 ಏನು ಹೇಳುತ್ತದೆ? Article 38 ಏನು ಹೇಳುತ್ತದೇ? Equality ಸಮಾನತೆ. ಈ ದೇಶದ ಸಂಪತ್ತು ಎಲ್ಲರಿಗೂ ಸೇರಿದ್ದು. ಅವರಿಗೆ ಊಟ ಕೊಡಬೇಕೆಂದು ಯಾರೂ ಯೋಚನೆ ಮಾಡುವುದಿಲ್ಲ. ರಾಷ್ಟ್ರಪತಿಗಳಿಗೂ ಒಂದೇ ಓಟು, ಕೂಲಿ ಮಾಡುವವನಿಗೂ ಒಂದೇ ಓಟು. Political equality ಕೊಟ್ಟಿದ್ದೇವೆ. Economic equality ಸರ್ಕಾರವನ್ನು ನಡೆಸತಕ್ಕಂತಹವರು, ಸತತವಾಗಿ ಬಂದಂತಹವರ ತಪ್ಪು ನೀತಿಗಳ ಕಾರಣದಿಂದಲೋ ಅಥವಾ ಇವರ ಕೈ ಮೀರಿದ ಕಾರಣದಿಂದಲೋ ಆ ಅರೆ ಹೊಟ್ಟೆ ತಿನ್ನುವವನಿಗೆ ಹೊಟ್ಟೆ ತುಂಬ ಅನ್ನ ಕೊಡಬೇಕಾದ ಜವಾಬ್ದಾರಿ ಇದೆಯೋ ಇಲ್ಲವೋ? ಏಕೆ ಈ Electronic Media ದವರಿಗೆ, ಉಳಿದ ನಮ್ಮ ಸ್ನೇಹಿತರಿಗೆ 1.5 ಲಕ್ಷ ಕೋಟಿ ರೂಪಾಯಿ ಯಾರಿಗೆ ವಜಾ ಮಾಡಿದ್ದಾರೆಂದು ತಿಳಿದುಕೊಳ್ಳುವುದಕ್ಕಾಗುತ್ತಿಲ್ಲ, 400 ಕೋಟಿ ರೂ. KSIIDC ಯಲ್ಲಿ ಹೋದರೆ ಎಲ್ಲಿ ಹೋಯಿತು ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಫುಟ್‌ಪಾತ್‌ನಲ್ಲಿ ಕೂಲಿ ಮಾಡುವವರಿಗೆ ಅಕ್ಕಿ ಕೊಡುತ್ತೇವೆಂದರೆ ದುಃಖ ಪಡುತ್ತೀರಿ! ನಿಮ್ಮನ್ನು ನೋಡಿ ನಾವು ದುಃಖ ಪಡಬೇಕಾಗಿದೆ. ನಿಮ್ಮ ತಿಳಿವಳಿಕೆ ಮಟ್ಟ ಎಲ್ಲಿ ಇದೆ, ನಿಮಗೆ ಹೃದಯ ಇದೆಯೋ ಇಲ್ಲವೆಂದು ನಮಗೆ ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆತುರದ ತೀರ್ಮಾನ ತೆಗೆದುಕೊಂಡರು. ದುಡುಕಿ ಒಂದು ಮಾತು ಹೇಳುತ್ತೇನೆ. ಎಷ್ಟು ದಿವಸ ಮುಖ್ಯಮಂತ್ರಿ ಆಗಿರುತ್ತಾರೆ ಎನ್ನುವುದು ಮುಖ್ಯವಲ್ಲ. ಇಂತಹ ವಿಷಯಗಳಲ್ಲಿ ಯಾವಾಗಲೂ ದುಡುಕಬೇಕು. ಅರ್ಜೆಂಟಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಏನು ಆಗುತ್ತದೋ ಆಗಿಯೇ ಹೋಗಲಿ. ಹಿಂದೆ ಇದ್ದಂತಹವರೂ ಕೂಡ ಇಂತಹ ವಿಚಾರಗಳು ಬಂದಾಗ ಬದ್ಧತೆಯಿಂದ ಆವೇಶದಿಂದ ನಿರ್ಣಯಗಳನ್ನು ತೆಗೆದುಕೊಳ್ಳದೆ ಇದ್ದಿದ್ದರೆ ನಾವು ಏನೂ ಸಾಧಿಸುವುದಕ್ಕಾಗುತ್ತಿರಲಿಲ್ಲ. ನನಗನ್ನಿಸುತ್ತಿದೆ, ಪರಿಶಿಷ್ಟ ಜಾತಿ, ಜನಾಂಗ, ಅಲ್ಪಸಂಖ್ಯಾತ ಜನಾಂಗದವರಿಗೆ ಸೇರಿದಂಥವರಿಗೆ ಒಂದು ಬೇರ್‌ವೆಲ್ ತೆಗೆಯುವುದಕ್ಕೋ, ಒಂದು ಇಟ್ಟಿಗೆ ಫ್ಯಾಕ್ಟರಿ ಮಾಡುವುದಕ್ಕೋ, ಯಾವುದೋ

ಒಂದು ಗಾರ್ಮೆಂಟ್ ಇಂಡಸ್ಟ್ರೀ ಮಾಡುವುದಕ್ಕೋ, ಹೀಗೆ ಇಂಥವರಿಗೆ ಕೋಟಿಗಟ್ಟಲೆ ಕೊಟ್ಟಿರುವುದೇನಲ್ಲ, ಮಿಸ್‌ಯೂಸ್ ಆಗಿರಬಹುದು, All right, ನಾವು ಯಾವ ರೀತಿ ಮಾತನಾಡುತ್ತೇವೆ? ಏನಪ್ಪಾ ಈ ದೇಶವೆಲ್ಲಾ ಇವರಗೇ ಆಗಿಹೋಯಿತು, ಎಲ್ಲಾ ಇವರಿಗೇ ಕೊಡಬೇಕು, ಎಲ್ಲಾ ಇವರ ಹತ್ತಿರವೇ ಇದೆ, ಎಲ್ಲಿ ನೋಡಿದರೂ ಇವರದ್ದೇ ಹಾವಳಿಯಾಗಿ ಹೋಯಿತು ಎಂದು ಹೇಳುತ್ತೇವೆ, ನಿಜವಾಗಿಯೂ ಹಾವಳಿ ಮಾಡುವವರದ್ದು ಶಬ್ಧವೇ ಇಲ್ಲ. ಇವರದ್ದು ಹಾವಳಿ ನಾವು ಮಾಡುತ್ತೇವೆ, ನಿಜವಾಗಿ ಹಾವಳಿ ಮಾಡುವವರಿಗೆ, ದೇಶವನ್ನೇ ಅರ್ಧ ನುಂಗಿಬಿಟ್ಟವರನ್ನು ಯಾರೂ ಹಿಡಿದುಕೊಳ್ಳುವುದಕ್ಕೆ ಪ್ರಯತ್ನವನ್ನೇ ಮಾಡಲಿಲ್ಲ. ಇದು ಬಹಳ ದುಃಖದ ಸಂಗತಿ. ಅಕ್ಕಿ ಕೊಡತಕ್ಕಂಥ ವಿಚಾರದಲ್ಲಿ, ದಯಮಾಡಿ ಬರುವ ತಿಂಗಳಿಗೆ ಜನರು ಕಾದಿದ್ದಾರೆ, ಆಹಾರ ಮಂತ್ರಿಗಳಾದ ದಿನೇಶ್, ನಿಮಗಿನ್ನೂ ಚಿಕ್ಕ ವಯಸ್ಸು ನಾನು ಅವರ ತಂದೆ ಜೊತೆ ಕೆಲಸವನ್ನು ಮಾಡಿದ್ದೇನೆ, ಸಂಸ್ಥೆಯಲ್ಲಿ ಮತ್ತು ಅಸೆಂಬ್ಲಿಯಲ್ಲಿ ಕೂಡ ಕೆಲಸ ಮಾಡಿದ್ದೇನೆ. ದಿನೇಶ್ ನೀವು ಶ್ರದ್ಧೆ ವಹಿಸಿ ಕೆಲಸ ಮಾಡಬೇಕು, It is a challenge to the Food Minister. ದಯಾಮಾಡಿ ಇಂಥ ವಿಷಯಗಳಲ್ಲಿ ಭಾವುಕರಾಗಿ ನಾವು ಈ ವಿಷಯಗಳ ಜೊತೆ ನಮ್ಮನ್ನು ತೋರಿಸಿಕೊಂಡು ಬಿಟ್ಟಿರುತ್ತೇವೆ. ಬಹಳ ಜೋರು ಜೋರಾಗಿ ನಾವು ಮಾತನಾಡಿಬಿಟ್ಟಿದ್ದೇವೆ. ಕಾರ್ಯಕ್ರಮದ ಅನುಷ್ಠಾನದಲ್ಲಿ ಏನಾದರೂ ಸ್ವಲ್ಪ ಏರುಪೇರಾದರೆ ತಮಗೆ ಬಹಳ humiliation ಆಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದು. ಯಾವ ಸಮಾಜದಲ್ಲೇ ಆಗಲಿ ಈ ಕಡೇ ವರ್ಗದ ಜನರು ಖುಷಿಯಾಗಿದ್ದರೆ, ಅವರು ಸರ್ಕಾರದ ನಿರ್ಣಯಗಳ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರೆ ಆಗ ಅದೊಂದು popular government ಎನ್ನುವ ತೀರ್ಮಾನಕ್ಕೆ ನಾವು ಬರುತ್ತೇವೆ. ಅವರ ಶಾಪಕ್ಕೆ ನಾವು ಗುರಿಯಾಗಬಾರದು. ಒಳ್ಳೆಯ ಕೆಲಸವನ್ನು ಅವರು ಮಾಡುತ್ತಾರೆನ್ನುವ ವಿಶ್ವಾಸವನ್ನು ಇಟ್ಟುಕೊಳ್ಳುತ್ತೇನೆ. Bidar to Chamarajnagar corridor ಬಗ್ಗೆ ಇನ್ನೂ ಯಾರೂ ಪ್ರಸ್ತಾಪ ಮಾಡಿಲ್ಲ. ಬಹುಶಃ, Industrially we have to develop ಈಗ ಇಲ್ಲಿ ಖೇಣಿಯವರು ಇದ್ದಾರೆ, I think, ಅವರೂ ಈ ವಿಚಾರದ ಬಗ್ಗೆ ಮಾತನಾಡಬಹುದು. ನನಗೂ ಕೂಡ ಸ್ವಲ್ಪ ತಪ್ಪು

ತಿಳುವಳಿಕೆ ಇತ್ತು. ನಮ್ಮಲ್ಲಿ ಎಷ್ಟು ಜಮೀನಿದೆಯೋ, ಅದು ಬೀದರ್‌ನಿಂದ ಇಲ್ಲಿಯವರೆಗೆ ಕಾರಿಡಾರ್ ಮಾಡಿದರೆಹೊರಟುಹೋಗಿಬಿಡುತ್ತದಲ್ಲಾ ಎನ್ನುವ ಕಲ್ಪನೆಯಿತ್ತು. ಆದರೆ ಅಂಕಿ ಅಂಶಗಳನ್ನು ನೋಡಿದಾಗ ಒಂದು ಕಡೆಯಲ್ಲಾ, ಎರಡು ಕಡೆಯಲ್ಲಿ ಈ ಬಗ್ಗೆ ವೆರಿಫೈ ಮಾಡಿಕೊಂಡಾಗ ಅದು ಆ ರೀತಿಯಾಗುವುದಿಲ್ಲವೆನಿಸಿತು. ಆಯಾಯ ಪ್ರದೇಶದಲ್ಲಿ, ಅಲ್ಲಲ್ಲಿಯೇ ಲಭ್ಯವಾಗತಕ್ಕಂಥ ಕಚ್ಚಾ ಪದಾರ್ಥಗಳನ್ನು ಉಪಯೋಗಿಸಿಕೊಂಡು ನಾವು ಇಂಡಸ್ಟ್ರೀಸ್‌ಗಳನ್ನು ಡೆವಲಪ್ ಮಾಡಿಕೊಂಡು ಹೋಗುವುದಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಈಗಾಗಲೇ ರಸ್ತೆ ಹೆಚ್ಚು ಕಡಿಮೆ ಬಂದುಬಿಟ್ಟಿದೆ. ಅನೇಕ ಜನರಿಗೆ ಅನುಕೂಲವಾಗುತ್ತದೆ. ಯಾವ ಒಣಭೂಮಿಯಿದೆ, ಹೆಚ್ಚು ಲಾಭ ಪಡೆದುಕೊಳ್ಳುವುದಕ್ಕೆ ಆಗುತ್ತಿಲ್ಲವೋ, ವ್ಯವಸಾಯ ಮಾಡುವುದಕ್ಕೆ ಆಗುತ್ತಿಲ್ಲವೋ, ಅರ್ಥಾತ್ ನಿರುಪಯುಕ್ತವಾಗಿರತಕ್ಕಂಥ ಜಮೀನು. ಅದನ್ನು ಬಳಸಿಕೊಂಡು ಕೆಲಸ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಟೂರಿಸಂ, ಏಕೆಂದರೆ ನನಗೆ ಗೊತ್ತಿದೆ, ನಾನು initiate ಮಾಡುತ್ತಿರುವವನಲ್ಲ. ತಮ್ಮ ದಯೆಯಿಂದ ಸ್ವಲ್ಪ ಟೈಂ ಕೊಟ್ಟಿದ್ದೀರಿ, ಆದುದರಿಂದ ನಾನು ಜಾಗ್ರತೆಯಾಗಿ ನನ್ನ ಮಾತನ್ನು ಮುಗಿಸಬೇಕಾಗಿರುತ್ತದೆ. ನಿಮ್ಮಿಂದ ಸೂಚನೆ ಬರುವುದಕ್ಕೆ ಅವಕಾಶ ಕೊಡದೆ ನಾನೇ ಸ್ವಲ್ಪ ಬೇಗ ಬೇಗ ಮಾತನಾಡಿ ಮುಗಿಸುತ್ತೇನೆ. ಈ ಟೂರಿಸಂ ಎನ್ನುವ ಇಲಾಖೆಯನ್ನು, ಅದೇನು ಗ್ರಹಚಾರವೋ ಏನೋ ಗೊತ್ತಿಲ್ಲ, ಯಾರು ಮಂತ್ರಿಯಾಗಿ ಬಂದರೂ ಕೂಡ ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ನನ್ನ ಪ್ರಕಾರ ಮಧ್ಯಮ ವರ್ಗದ ಜನರಿಗೆ ಮತ್ತು ಅದಕ್ಕಿಂತಲೂ ಕೆಳ ಹಂತದಲ್ಲಿರತಕ್ಕಂಥವರಿಗೆ ಮನರಂಜನೆ ಕೊಡತಕ್ಕಂಥ, ಅವರಲ್ಲಿರತಕ್ಕಂಥ ಹಣಕಾಸಿಗೆ ಲಭ್ಯವಾಗತಕ್ಕಂಥ ರೀತಿಯಲ್ಲಿ ಕೆಲವು tourist place ಗಳನ್ನು, ಐತಿಹಾಸಿಕವಾಗಿರತಕ್ಕಂಥ, ಕೆಲವು ನಿಸರ್ಗದ ದೃಷ್ಟಿಯಿಂದ ರಮಣೀಯವಾಗಿರತಕ್ಕಂಥ ಕೆಲವು ಜಾಗಗಳು, ಪುರಾಣ ಪ್ರಸಿದ್ಧವಾದಂಥ ಕೆಲವು ಜಾಗಗಳು, ಅಲ್ಲಲ್ಲೇ ಸಣ್ಣ ಸಣ್ಣದಾಗಿ ಒಂದು ಚೂರು ಬಂಡವಾಳ ಹಾಕಿ ಡೆವಲಪ್ ಮಾಡಿ ಅಲ್ಲಿ Dormitories, Canteens, ಇನ್ನೊಂದೋ, ಮತ್ತೊಂದೋ, ಅಲ್ಲಿ ಕೆಲವು sports activies, cultural programme ಗಳನ್ನು ಮತ್ತು ಕೆಲವೊಂದು ಕಾರ್ಯಕ್ರಮಗಳನ್ನಿಟ್ಟು encourage ಮಾಡಬಹುದು. ಈಗ ತಾವು ಸಾಗರದಿಂದ ಬಂದಿದ್ದೀರಿ. ಆ

ಜೋಗ್ ಹತ್ತಿರ ಗೋಳು ಹೇಗಿದೆ ನೀವೇ ಹೇಳಿ. ಎಷ್ಟು ಬಾರಿ ಹೇಳಿದರೂ, ಬಾಂಬೆ ಸರ್ಕ್ಯುಟ್, ಇಲ್ಲದೇ ಹೋದರೆ ಅಲ್ಲೇ ಇರುವ ಇನ್ನೊಂದು ಸರ್ಕ್ಯುಟ್. ಅಲ್ಲಿ ಬರೇ ರಾಜಕಾರಣಿಗಳು, ಅಧಿಕಾರಿಗಳು, ಆದರೆ ಸಾಮಾನ್ಯ ಜನರು ಹೋಗುವುದೆಲ್ಲಿ? ಅದ್ಯಾವುದೋ ಕಟ್ಟಿದರು, ಅರ್ಧಕ್ಕೆ ನಿಲ್ಲಿಸಿಬಿಟ್ಟರು. ಜೋಗ್‌ನ್ನು ನೋಡಬೇಕೆಂದು ಇಲ್ಲಿಂದ ಅಲ್ಲಿಗೆ ಅಷ್ಟು ದೂರ ಬಂದವರಿಗೆ ಅಲ್ಲೇನಾದರೂ ಉಳಿಯಬೇಕೆಂದರೆ ಜಾಗವೇ ಇಲ್ಲ, ಅಲ್ಲಿ ಊಟ ಕೂಡ ಸಿಗುವುದಿಲ್ಲ.. ನಾನು ನಿನ್ನೆ, ಅಕಸ್ಮಾತ್ತಾಗಿ ಏನೋ ಕೆಲಸವಿತ್ತು ಎಂದು ನಂದಿ ಬೆಟ್ಟಕ್ಕೆ ಹೋದ, ಬೆಟ್ಟ ಒಂದನ್ನು ನಾವು ಕಟ್ಟಲಿಲ್ಲ, ದೇವರು ಸೃಷ್ಟಿ ಮಾಡಿಟ್ಟಿದ್ದ ಎಂತಲೇ ಇವರು ಅದನ್ನು ಬಿಟ್ಟುಬಿಟ್ಟಿದ್ದಾರೆ. ಸರ್ಕಾರ ಎನ್ನುವುದರ ಒಂದು ಪ್ರಯತ್ನ, ಅಲ್ಲಿ ಯಾರಾದರೂ ಬರುತ್ತಾರೆ, ಹೋಗುತ್ತಾರೆ, ಅಲ್ಲಿ ಕ್ಲೀನ್ ಆಗಿ ಇಡಬೇಕು, ನಾಜೂಕಾಗಿ ಇರಲಿ, ಅಲ್ಲೇನಾದರೂ ಕೆಲವು ಆಕರ್ಷಣೆಗಳನ್ನು ಇಡೋಣ, ಬಂದವರಿಗೆ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡೋಣ, ಒಂದೇ ಒಂದು ಕ್ಯಾಂಟೀನ್ ಅಲ್ಲಿರುವುದು ಅಧ್ಯಕ್ಷರೆ ನನಗನ್ನಿಸುತ್ತದೆ, ಇವರು ಮಂತ್ರಿ ಎಂದಮೇಲೆ ಎಲ್ಲ ರೀತಿಯಲ್ಲೂ ಸರ್ಕಾರ ಅವರನ್ನು ಸಾಕುತ್ತದಲ್ಲ, ಅವರು ಕೈ ಹೀಗೆ ಎಂದರೆ ಕನ್ನಡಕ ಕೊಡುವುದಕ್ಕೆ ಒಬ್ಬ ಅಟೆಂಡರ್ ಇರುತ್ತಾನೆ, ಈ ಕಡೆ ಕೈ ಚಾಚಾದರೆ ನೀರು ಕೊಡುವುದಕ್ಕೆ ಒಬ್ಬ ಇರುತ್ತಾನೆ, ಶರೀರದ ಜಾಸ್ತಿ ಇದ್ದರೆ ಬಗ್ಗುವುದಕ್ಕೆ ಆಗುವುದಿಲ್ಲವೆಂದರೆ ಶೂವನ್ನು ಅಟೆಂಡರ್ ಆದವನೇ ಹಾಕುತ್ತಾನೆ, ಮಂತ್ರಿಗಳು ಬರುವ ಹೊತ್ತಿಗೆ ಡ್ರೈವರ್ ಕಾರ್‌ನ ಡೋರ್ ತೆಗೆಯುತ್ತಾನೆ, ಹೋಗಿಬಂದದ್ದಕ್ಕೆ ಪ್ರಯಾಣದ ವೆಚ್ಚವನ್ನು ಕೊಡುತ್ತಾರೆ, ಬಿಸಿ ಜಾಸ್ತಿಯಾದರೆ ಎ.ಸಿ. ಹಾಕಿಕೊಳ್ಳಬಹುದು, ಕಾಯಿಲೆ ಕಸಾಲೆ ಬಿದ್ದರೆ ಚಿಕಿತ್ಸೆಗೆ ಸರ್ಕಾರ ದುಡ್ಡೆಲ್ಲವನ್ನು ಕೊಡುತ್ತದೆ, ಎಲ್ಲಾ ಆಫೀಸರ್‌ಗಳು ಬಂದು ಪ್ರತಿ ದಿವಸ ಸಲ್ಯೂಟ್ ಹೊಡೆಯುತ್ತಾರೆ, ಏನಪ್ಪಾ ಇಷ್ಟೆಲ್ಲಾ ಸೌಕರ್ಯ ಕೊಟ್ಟು, ಕೋಟ್ಯಾಂತರ ರೂ.ಗಳನ್ನು ಈ ಸದನದಲ್ಲಿ ನಿಮಗೆ ಅನುದಾನ ಕೊಟ್ಟು ನೀವು ಟ್ರಸ್ಟೀಸ್ ಆಗಿ ಈ ಹಣವನ್ನು ನಮ್ಮ ಪರವಾಗಿ ಖರ್ಚು ಮಾಡಿ ಎಂದು ಈ ಇಲಾಖೆಗೆ ಹೇಳಿದರೆ, ಆ ಸದನದಲ್ಲಿ ಅನುದಾನ ಪಡೆದುಕೊಂಡು ಆ ಹಣವನ್ನು ತೆಗೆದುಕೊಂಡು ಖರ್ಚು ಮಾಡಬೇಕು ಎಂದರೆ conscience permit ಮಾಡುವುದು ಬೇಡವೆ? ಊಟ ಮಾಡುತ್ತೇವಲ್ಲಾ ಅಧ್ಯಕ್ಷರೆ ನಾವು, ಏನಾದರೂ ಕೆಲಸ ಮಾಡಿ ಜೀರ್ಣಿಸಿಕೊಳ್ಳಬೇಕಲ್ಲವೇ? Metabolic activity

ಇರಬೇಕಲ್ಲವೆ? ಇಲ್ಲದೇ ಹೋದರೆ ಆರೋಗ್ಯ ಕೆಟ್ಟು ಹೋಗುವುದಿಲ್ಲವೇ? Oath ತೆಗೆದುಕೊಂಡು ಅಧಿಕಾರಕ್ಕೆ ಬಂದವರು, if they don't discharge their responsibilities as per the Constitution ಏನಾಗಬಹುದು? ಆ ಬಾದಾಮಿ ಹತ್ತಿರ ಹೋಗುವ ಹಾಗೇ ಇಲ್ಲ. ಅಲ್ಲಿ ಹಂದಿಗಳ ಕಾಟ. ಹಂಪಿಯ ಹತ್ತಿರ ನೀವು ಸುಳಿದಾಡುವ ಹಾಗಿಲ್ಲ, ಇನ್ನು ಎಲ್ಲಿಗೆ ಹೋಗುವುದು ಜನ? ಎಲ್ಲಾ ಶ್ರೀಮಂತರೇ ಆಗಿ ಸಿಂಗಾಪುರಕ್ಕೆ ಮಲೇಶಿಯಾಕ್ಕೆ, ಮಾಲ್ಡೀವ್ಸ್‌ಗೆ ಹೋಗುವುದಕ್ಕಾಗುತ್ತದೆಯೇ? ಯಾರೋ ನಾವಂದಷ್ಟು ಜನ ಯಾರ್ಯಾದರೂ ಅಡ್ಜಸ್ಟ್ ಮಾಡಿದರೆ ಹೋಗಿ ಬರಬಹುದು, ಅಧ್ಯಕ್ಷರೆ, ತಮಗ್ಯಾವಾಗಲಾದರೂ ಇಂಥ ಅವಕಾಶ ಸಿಕಿತ್ತೆ? ಸಿಕ್ಕಿದಂಗಿಲ್ಲ. ನಾನೂ ಕಾಯುತ್ತಿದ್ದೇನೆ, ಇಬ್ಬರೂ ಯಾರನ್ನಾದರೂ ಹುಡುಕೋಣ. ಆದರೆ, what about the common man? ಅವನು ಮಂಗಳೂರಿಗೆ ಕೂಡ ಹೋಗುವುದಕ್ಕಾಗುವುದಿಲ್ಲ, ಕೋಲಾರ–ದವರಿಗೆ ಮಂಗಳೂರು ಎಂದರೆ ಅಪರೂಪವಲ್ಲವೆ? ಸಮುದ್ರವನ್ನು ಈ ಕಡೆಯವನು ಎಲ್ಲಿ ನೋಡಿದ್ದಾನೆ? You have tried to make everything impossible for the last man. ಅವನಿಗೆ ಹಣ್ಣು ಒಳ್ಳೆಯದು ಸಿಗಬಾರದು, ಅನ್ನ ಸಲೀಸಾಗಿ ಸಿಗಬಾರದು, ಟೂರಿಸ್ಟರ್ ಪ್ಲೇಸ್‌ಗಳಿಗೆ ಹೋಗುವುದಕ್ಕೆ ಅವನಿಗೆ ಅವಕಾಶ ಇರಬಾರದು, ಅಂದರೆ ಅವನ ಬಾಳು ಇಲ್ಲಿ ಅತ್ಯಂತ ನರಕವಾಗಿರಬೇಕು. ದುಡ್ಡು ಇಲ್ಲವೇ ಇವರಿಗೆ? ಹೊರಗಡೆಯಿಂದ ಬಂದು ಇನ್‌ವೆಸ್ಟ್ ಮಾಡುವವರಿಲ್ಲವೆ? ಆ ನಂದಿ ಹತ್ತಿರ ಒಂದು ರೋಪ್ ವೇ ಹಾಕುವುದಕ್ಕೆ ಏನು ಕಷ್ಟ? ಈಗ ಹಾಸನ ಇದೆ, ಅಲ್ಲಿ ಶ್ರವಣಬೆಳಗೊಳ, ಬೇಲೂರು, ಹಳೆಬೀಡು, ಇಂಥವುದ್ದನ್ನೆಲ್ಲವನ್ನು ಸೇರಿಸಿ ಒಂದು ಟೂರ್ ಪ್ಯಾಕೇಜ್ ಮಾಡಿ, ಸರ್ಕಾರಿ ಶಾಲೆಗಳ ಮಕ್ಕಳು ಹೋಗಿ ಬರುವುದಕ್ಕೆ ಕನ್ಸೆಶನ್ ಕೊಡಿ, ಫ್ರೀ ಕೊಡಿ. ಅವರು ಹೋಗಿ ಬರುವ ಹಾಗೆ ಮಾಡಿ. ಅಲ್ಲೋಂದು ನಾಲ್ಕು ಜನ ಅಂಗಡಿ ಇಟ್ಟುಕೊಂಡು ಬದುಕುತ್ತಾರೆ. ನಮ್ಮ political dispensation ಹೇಗಿದೆ ಎಂದರೆ DPAR ನಲ್ಲಿರುವಂತಹ ಎಲ್ಲಾ ಇಲಾಖೆಗಳ ಪೈಕಿ ಏಳೆಂಟು important portfolios. ಉಳಿದವರಿಗೆಲ್ಲ ಸಿಕ್ಕಿಲ್ಲ, ಸಿಕ್ಕಿಲ್ಲ ಎಂದು ಕೊರಗು ಇದೆ. I don't understand. Library, museums, archeology ಯಿಂದ ಹಿಡಿದು which is not important

department? Portfolios ಆಯ್ಕೆ ಮಾಡಿಕೊಳ್ಳುವಾಗ ಇದು ಸರಿಯಿದೆ, ಇದು ಪ್ರಯೋಜನವಿಲ್ಲ ಎಂದು ವ್ಯಾಖ್ಯಾನಗಳಿಗೆ ನಾವು ನಮ್ಮ ನಡತೆಯಿಂದ ಅವಕಾಶ ಕೊಟ್ಟರೆ, ಪೊಲೀಸ್ ಆಫೀಸರ್ ಬಂದು CODಯಲ್ಲಿದ್ದೇನೆ, ಅದನ್ನು ತಪ್ಪಿಸಿ, ನನಗೆ ಮಾರ್ಕೆಟ್ ಟ್ರಾಫಿಕ್ ಕೊಡಿಸಿ ಎಂದು ಕೇಳಿದರೆ ನಾವು ಅವನನ್ನು ಏಕೆ ತಪ್ಪು ತಿಳಿದುಕೊಳ್ಳಬೇಕು? ಹೌದೋ ಅಲ್ಲವೋ? ನಮಗೆ ಅವನ ಬಗ್ಗೆ ಮಾತನಾಡುವುದಕ್ಕೆ ಹಕ್ಕಿದೆಯೇ? ನಾವೇ ಈ ಗಿರಾಕಿಗಳು, ಅವರ ಬಗ್ಗೆ ಮಾತನಾಡುವುದಕ್ಕೆ ನಮಗೆ ಏನು ಹಕ್ಕಿರುತ್ತದೆ? ಆತ್ಮಾವಲೋಕನವಾಗಬೇಕು. Tourism Department ಕಾಯಕಲ್ಪ ಕೊಡುವಂತಹ ದಿಕ್ಕಿನಲ್ಲಿ ಕೆಲಸ ಮಾಡಲಿ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು hostels ಬಗ್ಗೆ ಹೇಳುವುದಾದರೆ, hostels ಬಗ್ಗೆ ನೀವು ಪ್ರಸ್ತಾಪ ಮಾಡಿದಿರಿ. ಈ hostels ಬಗ್ಗೆ ಕಡಿಮೆ ಮಾತನಾಡಿದರೆ ಗೌರವ ಹೆಚ್ಚು. ಅನುಕೂಲಸ್ಥರ ಮಕ್ಕಳು ಯಾರಾದರೂ hostels ಹೋಗುತ್ತಾರಾ? ಯಾವ ಅನುಕೂಲಸ್ಥರ ಮಕ್ಕಳೂ hostelsಗೆ ಹೋಗುವುದಿಲ್ಲ. ಅವರ ತಂದೆ ತಾಯಿಗಳಿಗೆ ಎಂತಹ ದುರ್ಗತಿ ಇರತ್ತದೋ, ಈ ಮಕ್ಕಳು ಓದಲಿ, ನಾಲ್ಕು ಅಕ್ಷರ ಕಲಿತುಕೊಳ್ಳಲಿ ಎಂದು ಅವರನ್ನು ತಂದು ಹಾಸ್ಟೆಲ್‌ಗೆ ಹಾಕುತ್ತಾರೆ. ಅವರಿಗೆ ಕೊಡುವ ಊಟ ನೋಡಬೇಕು. ಆ ಹಾಸ್ಟೆಲ್ ಶುಚಿತ್ವ ನೋಡಬೇಕು. ನೀವು ಒಂದು ಸಲ Cook ನ ಅವತಾರ ನೋಡಬೇಕು. ಯಾರೋ ಒಬ್ಬ Superintendent incharge ಇರುತ್ತಾರೆ, supply ಮಾಡುವವನಿಗೆ, ಅವನಿಗೂ understanding ಇರುತ್ತದೆ. ನಾಲ್ಕು ಜನ ಹುಡುಗರು ಗಲಾಟೆ ಮಾಡುವವರಿದ್ದರೆ ಅವರಿಗೆ ಒಂದು ಸ್ವಲ್ಪ ದುಡ್ಡು ಕೊಟ್ಟುಬಿಡುತ್ತಾರೆ. ಇದಕ್ಕೆ ಚಿಕ್ಕ ವಯಸ್ಸಿನ ಮಂತ್ರಿಗಳಿದ್ದಾರೆ. ಬರೀ Social Welfare Minister ಮಾಡಬೇಕೆಂದೇನೂ ಇಲ್ಲ. Every Minister is Government. ನೀವೆಲ್ಲ hostels ಗೆ surprise inspections-ತೆಗೆದುಕೊಳ್ಳಬಹುದು. ಅಲ್ಲಲ್ಲಿ ಪೊಲೀಸ್‌ನವರನ್ನು ಕರೆದು ಹತ್ತು ಕಡೆ ಅವರನ್ನು handover ಮಾಡಿ. ಅವರಿಗೆ ಭಯ ಬರಲಿ. ಬಡವರ ಮಕ್ಕಳ ಊಟ ತಿಂದರೆ ಜೈಲಿಗೆ ಹೋಗಬೇಕಾಗುತ್ತದೆ ಎನ್ನುವ ಭಯ ಅವರಿಗೆ ಬರಲಿ. ಒಂದು ಸರ್ಕಾರ ಜೀವಂತ ಇದೆ, ಇದು ಬಡವರ ಪರ ಇದೆ, ತಪ್ಪನ್ನು ಸಹಿಸುವುದಿಲ್ಲ, ತಪ್ಪಿಸ್ಥರಿಗೆ

ಶಿಕ್ಷೆ ಆಗುತ್ತದೆ ಎನ್ನುವ message ಹೋಗಬೇಕಾಗಿದ್ದರೆ ಈ ರೀತಿಯ ಕೆಲವು ಕಾರ್ಯಗಳನ್ನು ನೀವು ಮಾಡಬೇಕಾಗುತ್ತದೆ. ಮಾನ್ಯ ಹೆಚ್.ಕೆ. ಪಾಟೀಲರವರು ಇಲ್ಲಿ ಕುಳಿತ್ತಿದ್ದಾರೆ. ಇವರಿಗೆ ಜನ್ಮ ಕೊಟ್ಟ ತಂದೆ ನಮಗೆ ರಾಜಕೀಯವಾಗಿ ತಂದೆ ಸ್ಥಾನದಲ್ಲಿ ನಿಂತಂತಹ ದಿವಂಗತ ಕೆ.ಹೆಚ್. ಪಾಟೀಲ್‌ರವರು. ಅವರು ಆಮೇಲೆ ಎಂ.ಎ., ಎಲ್ಲಾ ಮಾಡಿಕೊಂಡರು. Originally ಅವರು ಅಷ್ಟು ದೊಡ್ಡ academic background ಇದ್ದವರಲ್ಲ. ಆಹಾರ ಮತ್ತು ಅರಣ್ಯ ಎರಡೂ ಖಾತೆ ಅವರ ಕೈಯಲ್ಲಿ ಇತ್ತು. ತುಮಕೂರಿನಿಂದ ಹಿಡಿದು upto ಗಂಗಾವತಿಯವರೆಗೂ ಎಲ್ಲಾ mills raid ಮಾಡಿಸಿದರು. ಬಚ್ಚಿಟ್ಟಿದ್ದ ದಾಸ್ತಾನೆಲ್ಲ ಹೊರಗೆ ಬಂತು. ಎರಡು ತಿಂಗಳಲ್ಲಿ he was able to bring down the prices. ಇವತ್ತುಕೆ.ಹೆಚ್. ಪಾಟೀಲ್‌ರವರು ಇಲ್ಲಿ ಇಲ್ಲ. ನಮ್ಮ ಕರ್ತವ್ಯದ ಮೂಲಕ ಸಮಾಜಕ್ಕೆ ಒಳ್ಳೆಯದನ್ನು ಮಾಡಿ ಅಗಲಿ ಹೋಗಿರುತಕ್ಕಂಥ ಪ್ರತಿಯೊಬ್ಬ ಮನುಷ್ಯನನ್ನೂ ಗೌರವ ಭಾವನೆಯಿಂದ, ಕೃತಜ್ಞತಾ ಭಾವನೆಯಿಂದ ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಇವರೆಲ್ಲ ವಾರಸುದಾರರು. ಇವರಿಂದ ನಾವು ಆ ಕೆಲಸವನ್ನು ನಿರೀಕ್ಷೆ ಮಾಡುತ್ತೇವೆ. ಹೊಸದಾಗಿ ಹಾಸ್ಟೆಲ್‌ಗಳು ಆಗಬೇಕಾಗಿದೆ. ನಾವು ಜನರಿಗೆ ಮಾತು ಕೊಟ್ಟಿದ್ದೇವೆ. ಅಲ್ಪಸಂಖ್ಯಾತರ ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಎಲ್ಲ ಕಡೆಗೂ ಹೋಗಿ ನೋಡುತ್ತೇವಲ್ಲ, ಹಾಸ್ಟೆಲ್‌ಗಳೇ ಇಲ್ಲ. ಬಹಳ ಕಷ್ಟ. ಕೃಷಿ ವಿಶ್ವವಿದ್ಯಾಲಯ ಇದೆಯಲ್ಲ, ಅಲ್ಲಿ ladies hostel ಇಲ್ಲ. ಅಲ್ಲಿ ಹೆಣ್ಣುಮಕ್ಕಳಿಗೆ ಏನಾದರೂ seat ಸಿಕ್ಕಿದರೆ ಅವರು private hostel ಅಥವಾ ಬೇರೆಇನ್ನೆಲ್ಲಿಗೋ ಹೋಗಬೇಕಾಗುತ್ತದೆ. Why it doesn't get into your head? ಇದು ಬಹಳ ದೊಡ್ಡ ಜವಾಬ್ದಾರಿ.ಇನ್ನು ಆರೋಗ್ಯದ ಬಗ್ಗೆ ಎರಡು ವಿಚಾರಗಳನ್ನು ಹೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಆಹಾರ ಪದ್ಧತಿಯಿಂದಲೋ ಅಥವಾ ನಮ್ಮ ಅಥವಾ ನಮ್ಮ ಜೀವನದ ಶೈಲಿ ಬದಲಾವಣೆಯಾಗಿರುವುದರಿಂದಲೋಮೊದಲು ನಾವು ನೋಡುತ್ತಿದ್ದಕ್ಕಿಂ-ತಲೂ, ಕೇಳುತ್ತಿದ್ದಕ್ಕಿಂತಲೂ ಕೂಡ ಹೆಚ್ಚು ಮಧುಮೇಹಕ್ಕೆ ಒಳಗಾಗಿರತಕ್ಕಂಥ ರೋಗಗ್ರಸ್ತರನ್ನು ನಾವು ನೋಡುತ್ತಿದ್ದೇವೆ. ಇದು ಕ್ರಮೇಣ ಎಲ್ಲಿ ಹೋಗಿದೆ ಎಂದರೆ kidney failure ಆಗಿ dialysisಗೆ ಬಂದು

ಬಿಟ್ಟಿದ್ದಾರೆ. ಒಂದು kidney institute ಅನ್ನು ನಾವು ತೆಗೆದಿದ್ದೇವೆ. ಅಲ್ಲೊಬ್ಬ Urologist ಇದ್ದಾರೆ, he is a good doctor, but ಬಹಳ limited patients ನೋಡುತ್ತಾರೆ. ಬಡವರು dialysis ಬರಬೇಕಾದರೆ ಇಲ್ಲಿಗೆ ಬರುವುದಕ್ಕೆ ಆಗುವುದಿಲ್ಲ. ಯಾವುದೇ Government Hospital ನಲ್ಲಿ ಕೂಡ dialysisi units ಕೆಲಸ ಮಾಡುವುದಿಲ್ಲ. ಅವರು private ನಲ್ಲಿ ಎಲ್ಲಿ ಹೋಗಿ ಮಾಡಿಸಿಕೊಳ್ಳುವುದು. ನಾನು ಬಡವರ ಬಗ್ಗೆ ಅಷ್ಟೆ ಮಾತನಾಡುತ್ತಿದ್ದೇನೆ. ಶ್ರೀಮಂತರಿಗೆ kidney problem ಬಂದರೆ ನನಗೇನು ದುಃಖ ಇಲ್ಲ. ನನ್ನ ದುಃಖವೇನೆಂದರೆ ಬಡವರಿಗೆ ಬರುತ್ತದಲ್ಲ, ಅವರಿಗೆ private hospitalಗೆ ಹೋಗುವುದಕ್ಕೆ ದುಡ್ಡಿಲ್ಲ, Government Hospital ನಲ್ಲಿ ಮಾಡಿಸುವುದಕ್ಕೆ ಅವಕಾಶವಿಲ್ಲ. ಅವನಿಗೆ ಎರಡೇ option. ಅವನಿಗೆ ಬದುಕಬೇಕು ಎಂದು ಆಸೆ ಇದ್ದರೂ ಕೂಡ ಕ್ರಮೇಣ ಕ್ಷೀಣಿಸಿ ಕೊರಗಿ ಸಾಯಬೇಕು. ಮಾನ್ಯ ಅಧ್ಯಕ್ಷರೆ, ಯಾವ ಸ್ವಾತಂತ್ರ್ಯ? ಮನೆಗೆ, ಮನೆಗೆ ಹೋಗಿದ್ದೇವೆ, ಬಾಗಿಲು ಬಾಗಿಲು ಸುತ್ತಿದ್ದೇವೆ, ನಗು ಬಾರದೇ ಹೋದರೂ ನಕ್ಕಿದ್ದೇವೆ, ಕಾಲಲ್ಲಿ ಶಕ್ತಿ ಹೋದರೂ campaign ಮಾಡಿದ್ದೇವೆ, ಹತ್ತು ಗಂಟೆಯಾದರೂ ಮನೆ ಬಾಗಿಲು ತಟ್ಟಿದ್ದೇವೆ, ಹೇ ಮಾರಾಯ ಈ ಸಲ ಸ್ವಲ್ಪ ತಳ್ಳಿಬಿಡಪ್ಪ ಎಂದು ಕೈಮುಗಿದ್ದಿದ್ದೇವೆ. ಅಧ್ಯಕ್ಷರೆ ಇದೆಲ್ಲ ಏಕೆ? ಈ ಅಧಿಕಾರಕ್ಕೆ ಅರ್ಥ ಹೇಳಿ. ಒಬ್ಬ kidney patient ಗೆ dialysisi ಮಾಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ನಮಗೆ ಯೋಗ್ಯತೆವಿಲ್ಲವೆಂದರೆ ಈ ಸಭೆ ಏಕೆ, ನೀವು ಏಕೆ, ನಾನು ಏಕೆ, ಈ ಸರ್ಕಾರ ಏಕೆ ಇರಬೇಕು? ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರತಿ ತಾಲ್ಲೂಕು ಸರ್ಕಾರ ಆಸ್ಪತ್ರೆಯಲ್ಲಿ dialysisi unit ಇರಬೇಕು, tfree dialysisi ಮಾಡಿಸಬೇಕು ಎಂದು ಹೇಳಿ ನಾವು ಜನರಿಗೆ ವಾಗ್ದಾನ ಕೊಟ್ಟಿದ್ದೇವೆ. ಇಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಕಾಣುತ್ತಿಲ್ಲ. ಹಿರಿಯ ಮಂತ್ರಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ನಿಮಗೆ term– ಐದೇ ವರ್ಷ, extension ಇರುವುದಿಲ್ಲ. If you mean business, ನಿಮ್ಮ ಮಾತುಗಳ ಬಗ್ಗೆ ನಿಮಗೆ ಲಕ್ಷ್ಯವಿದ್ದರೆ war-footing ನಲ್ಲಿ ಒಂದೊಂದು ಕ್ಷಣ ಕೂಡ ನೀವು ಕುಳಿತುಕೊಳ್ಳುವ ಹಾಗೆ ಇಲ್ಲ. ಎರಡು ಮೂರು ತಿಂಗಳೊಳಗಾಗಿ, maximum six months ಒಳಗಾಗಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ

ಸರ್ಕಾರಿ ಆಸ್ಪತ್ರೆಗಳಲ್ಲಿ dialysis unit ಇರಬೇಕು, ಅವುಗಳು ಕೆಲಸ ಮಾಡಬೇಕು ಮತ್ತು ಯಶಸ್ವಿಯಾಗಬೇಕು. Same way ನಾನು ಹೇಳಿದ್ದೇನೆ. ಪ್ರತಿ ಜಿಲ್ಲೆಗೂ ಒಂದು ಸರ್ಕಾರಿ ಮೆಡಿಕಲ್ ಕಾಲೇಜು ಬೇಕೇ ಬೇಕು. ಈಗಾಗಲೇ ಸುಮಾರು ಜಿಲ್ಲೆಗಳಲ್ಲಿ cover ಆಗಿವೆ. ಸರ್ಕಾರ ಮೆಡಿಕಲ್ ಕಾಲೇಜು ಏಕೆ ಬೇಕು ಎಂದು ಕೇಳುತ್ತೇನೆಂದರೆ ನಿಮ್ಮ Super Specialty Hospital corporate bodies ನಲ್ಲಿ ಬಂದು ವಿರಾಜಮಾನರಾಗಿ ಇವತ್ತು ಬೆಂಗಳೂರಿನಲ್ಲಿದ್ದಾರೆ, ಇಂತಹ Super Specialty Hispital ಪ್ರತಿ ಜಿಲ್ಲೆಗೆ ಬರಬೇಕಾಗಿದ್ದರೆ, ನೀವು ಸರ್ಕಾರಿ ಮೆಡಿಕಲ್ ಕಾಲೇಜನ್ನು ಕಟ್ಟಿರಿ,sanction ಮಾಡಿ, ಅದಕ್ಕೆ ಹೊಂದಿಕೊಂಡಂತೆ Super Specialty Hispital ಅನ್ನು ಸುಸಜ್ಜಿತವಾಗಿ ನೀವು ಸ್ಥಾಪನೆ ಮಾಡಿ. ಯಾವುದೇ ಬಡವನಿಗೆ ಎಂತಹ ಖಾಯಿಲೆ ಬಂದರೂ ಕೂಡ ಅವನು ನಿರಾತಂಕವಾಗಿ ಆಸ್ಪತ್ರೆ ಒಳಗಡೆ ಹೋಗುವ ಹಾಗೆ ಇರಬೇಕು.

ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಆಸ್ಪತ್ರೆಗಳು ಇದೆಯಲ್ಲಾ ನಾನು ಅವುಗಳ ಹೆಸರುಗಳನ್ನು ಹೇಳುವುದಿಲ್ಲ. ವಿಕ್ಟೋರಿಯಾ ಆಸ್ಪತ್ರೆ fail ಆಗಿ ಹೋಯಿತು, ಬೌರಿಂಗ್ ಆಸ್ಪತ್ರೆಗೆ ಶಕ್ತಿ ಇಲ್ಲ, ವಾಣಿವಿಲಾಸ್ ಆಸ್ಪತ್ರೆ ಮಲಗಿಕೊಂಡಿದೆ, ಮಿಂಟೊ ಆಸ್ಪತ್ರೆಗೆ ಕಣ್ಣೂ ಸರಿಯಾಗಿಲ್ಲ, ಸಂಜಯ್‌ಗಾಂಧಿ ಆಸ್ಪತ್ರೆಗೆ ಕೈ-ಕಾಲು ಮುರಿದು ಹೋಗಿದೆ, ಎಲ್ಲಿಗೆ ಹೋಗಬೇಕು? ಅನಿವಾರ್ಯವಾಗಿ ನೀವು ಇವರ ಹತ್ತಿರವೇ ಹೋಗಬೇಕು, dead body ಯನ್ನು ಕೊಡಬೇಕಾದರೆ, ಹಣವನ್ನು ಕಟ್ಟುವವರೆಗೂdead body ಯನ್ನು release ಮಾಡುವುದಿಲ್ಲ. ಅವರಿಗೆ ICU ಖಾಲಿ ಇದೆಯೆಂದರೆ, ನಿಮಗೆ ಅಗತ್ಯವಿಲ್ಲದಿದ್ದರೂ ICU ಹಾಕುತ್ತಾರೆ. Ventilator, ನಾವೇ ventilator ನಲ್ಲಿ ಇದ್ದೇವೆ, ಅವರದೇನಪ್ಪಾ ರೋಷ? ನಮಗೆ ಸರ್ಕಾರಿ ಕಾಲೇಜುಗಳನ್ನು ಪ್ರತಿ ಜಿಲ್ಲೆಗಳಲ್ಲೂ ಪ್ರಾರಂಭ ಮಾಡುವುದಕ್ಕೇ ಏನು ಕಷ್ಟವಾಗುತ್ತದೆ? ಮಾನ್ಯ ಧರ್ಮಸಿಂಗ್‌ರವರು, I think at one point of time he took a decision. ಅವರು 5 ಕಾಲೇಜುಗಳನ್ನು ಮಾಡಿದರು. ತಾವು ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಮಾಡಿ, ಸುಸಜ್ಜಿತವಾಗಿರುಂಥ Super Speciality Hospital ಗಳನ್ನು top priority ಮೇಲೆ ಮಾಡಬೇಕಾಗುತ್ತದೆ.

ನಾವು ಆಯಾ ಕಾಲಮಾನಕ್ಕೆ ಹೊಂದಿಕೊಂಡಂತೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ನಮಗೆ ಅಧಿಕಾರ ಬಯಸಿದಾಗ ಬರುವುದಿಲ್ಲ, ಅದು ಉಳಿಯುತ್ತದೆ ಎಂದಾಗ ಉಳಿಯುವುದಿಲ್ಲ, ಅದು ಬರುವುದು urgent, ಹೊರಟು ಹೋಗುವುದು urgent, ನಾವು ಅಧಿಕಾರದಲ್ಲಿದ್ದಾಗ ಮಾಡಿದ್ದೆ ಶಾಶ್ವತವಾಗಿ ದಾಖಲೆಗಳಲ್ಲಿ ಉಳಿದು ಹೋಗುತ್ತದೆ. ದಯಮಾಡಿ ಈ ಕಡೆಗೆ ಗಮನ ಕೊಡಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ವ್ಯವಸಾಯದ ಬಗ್ಗೆ reportನಲ್ಲೂ ಹೇಳಿದ್ದಾರೆ, Governor's address ನಲ್ಲೂ ಹೇಳಿದ್ದಾರೆ.

ಅಧ್ಯಕ್ಷರು : ತಾವು ಹೇಳಿದ್ದು ನಿಜ, Medical College ಅನ್ನು ಏನೋ ಪ್ರಾರಂಭ ಮಾಡುತ್ತೇವೆ. ಆದರೆ ನಮ್ಮ ಆಸ್ಪತ್ರೆಗಳಿಗೆ ಆ ಡಾಕ್ಟರ್‌ಗಳು ಬರುವುದೇ ಇಲ್ಲವಲ್ಲಾ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು raise ಮಾಡಿದ್ದು, ಒಳ್ಳೆಯ ವಿಚಾರವಾಗಿದೆ. ಇದು ಒಂದು ವ್ಯೂಹ, ನಾವು ಓದಿಸಿದ ನಮ್ಮ ಡಾಕ್ಟರ್, ನಮ್ಮ ಸರ್ಕಾರದ ಉಪ್ಪು ತಿಂದಿದ್ದಾನೆ, ಸಂಬಳ ತಿಂದಿದ್ದಾನೆ, ಋಣ ತಿಂದಿದ್ದಾನೆ. ಇವನೇ private Hospitalನ 'expert Doctorಆಗಿದ್ದಾನೆಂಬುದು ಗೊತ್ತಾ?

ಶ್ರೀ ಹೆಚ್.ಡಿ ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಅವರು MD., MS., ಮಾಡಬೇಕಾದರೆ ಎರಡು ಕೋಟಿ, ಎರಡೂವರೆ ಕೋಟಿ ರೂ.ಗಳನ್ನು ಕೊಡಬೇಕು, ಇಷ್ಟು ಹಣವನ್ನು invest ಮಾಡಿ Government Collegeಗೆ ಏಕೆ ಬರುತ್ತಾನೆ? ಇವತ್ತು ಕಾಲೇಜುಗಳನ್ನು ಕಟ್ಟಬಹುದು, ಅದಕ್ಕೆ ಹಣದ ಸಮಸ್ಯೆ ಇಲ್ಲ. ಆದರೆ ಮಾನ್ಯ ರಮೇಶ್ ಕುಮಾರ್‌ರವರೆ, ಅಧ್ಯಕ್ಷರು ಹೇಳಿದ ರೀತಿಯಲ್ಲಿ ಸರ್ಕಾರಿ ಕಾಲೇಜುಗಳಿಗೆ ಈಗ ಇರುವಂಥ ಸಂಬಳದಲ್ಲಿ ಯಾವ ಡಾಕ್ಟರ್‌ಗಳು ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ನಾವು ತಾಲ್ಲೂಕು ಸೆಂಟರ್‌ಗಳಿಗೆ ಮತ್ತು Primary Health Care ಗಳಿಗೆ, Centreಗಳಿಗೆ, Doctorಗಳು ಸಿಗುವುದಿಲ್ಲ? ಇವತ್ತು ತಾವು ಸಂಬಳವನ್ನು ಜಾಸ್ತಿ ಮಾಡದಿದ್ದರೆ ಅವರು ಯಾವುದೇ ಕಾರಣಕ್ಕೂ ಬರಲು ಸಾಧ್ಯವಿಲ್ಲ.ಅವರು ಎರಡೂವರೆ ಕೋಟಿ ರೂ.ಗಳನ್ನು ಕೊಟ್ಟು ಎಂ.ಡಿ. ಮಾಡಿರುತ್ತಾರೆ. ಅವರನ್ನು

district levelನಲ್ಲಿ ಹೋಗಿ ಕೆಲಸ ಮಾಡು ಎಂದರೆ, ಅವರು ಎಲ್ಲಿ ಹೋಗಿ ಮಾಡುತ್ತಾರೆ? ಇದು ಸಮಸ್ಯೆ ಇರುವಂಥದ್ದು.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ, ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾಗಿರುವಂಥ ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ವಿರೋಧಪಕ್ಷದ ನಾಯಕರಾದಂಥ ಮಾನ್ಯ ಕುಮಾರಸ್ವಾಮಿಯವರು ಬಹಳ ಗಂಭೀರವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಮಾನ್ಯ ಕುಮಾರಸ್ವಾಮಿಯವರು ಒಂದು ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಇವತ್ತು ನಾವು ಪ್ರತಿಯೊಂದು ಜಿಲ್ಲೆಗೂ ಮಾಡುವಂಥ ಅನಿವಾರ್ಯತೆ ಇದೆ, ಅದಕ್ಕೆ ಸರ್ಕಾರದ ಸಂಪೂರ್ಣ ಸಮ್ಮತಿ ಇದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಕೂಡ reply ಕೊಡುತ್ತಾರೆ. ಇವತ್ತು ವೈದ್ಯರ ಕೊರತೆ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ತಾಲ್ಲೂಕು ಮಟ್ಟಗಳಲ್ಲಿ ಮತ್ತು CHCಗಳಲ್ಲಿ ವೈದ್ಯರುಗಳಿಲ್ಲ, ಏಕೆಂದರೆ, P.G. Courses ಬಹಳ ದುಬಾರಿಯಾಗಿದೆ. ಅದಕ್ಕೆ ನಾವು ಕಳೆದ ವಿಧಾನಸಭೆಯಲ್ಲಿ ಒಂದು Bill pass ಮಾಡಿದ್ದೇವೆ. ಅವರು compulsory one year ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಲ್ಲಿ pass ಆಗಿ ಸೇವೆ ಮಾಡಬೇಕೆಂಬ ಬಿಲ್ ಎರಡೂ ಸದನಗಳಲ್ಲೂ Governor assent ಆಗಿ ಕೇಂದ್ರ ಸರ್ಕಾರದ ಮುಂದೆ present ಮಾಡಲಾಗಿದೆ. ಒಂದು ವೇಳೆ ಅದಕ್ಕೆ ಅನುಮೋದನೆ ಸಿಕ್ಕರೆ ತಾಲ್ಲೂಕು ಮತ್ತು Community Helth Centre ನಲ್ಲಿ Post Graduate Doctors ಸಮಸ್ಯೆ ಏನು ಇದೆ, ಆ problem solve ಆಗುತ್ತದೆ. ಏಕೆಂದರೆ, ಅವರು compulsory one year ಸೇವೆ ಮಾಡಲೇ ಬೇಕಾಗುತ್ತದೆ.

ಅಧ್ಯಕ್ಷರು : ಅವರು one year compulsory ಮಾಡುತ್ತಾನೆ, ಅದು ಆದ ಮೇಲೆ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, every year fresh batch ನವರು ಬರುತ್ತಾ ಇರುತ್ತಾರೆ, ಇದು permanent solution. ಈ ವರ್ಷ ಏನು ಪಾಸ್ ಆಗಿ ಬರುತ್ತಾರೆ, ಅವರು ಒಂದು ವರ್ಷ ಸೇವೆ ಮಾಡುತ್ತಾರೆ, ಇನ್ನೊಂದು ವರ್ಷಕ್ಕೆ ಇನ್ನೊಂದು batch ಬಂದಿರುತ್ತದೆ.

ಇದು continuous ಆಗಿ ಇರುತ್ತದೆ. ಇದು ಒಂದು ತಾತ್ಕಾಲಿಕವಾದ ಪರಿಹಾರ. ಎರಡನೆಯದಾಗಿ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಇವತ್ತು ಜಿಲ್ಲೆಗೆ ಒಂದು ಕಾಲೇಜ್ ಅನ್ನು ಕೊಡುವ ಅವಶ್ಯಕತೆ ಇದೆ. ಏಕೆಂದರೆ, ಒಂದು ಸಾಮಾನ್ಯ ಬಡ ರೋಗಿಗಳಿಗೆ ಉಚಿತವಾಗಿರುವಂಥ minimum speciality services, Super speciality service ಆಮೇಲೆ add ಮಾಡೋಣ. Minimum speciality services ಅನ್ನು ನಾವು ಕೊಡುವುದಕ್ಕೆ ಆಗುತ್ತದೆ. ಮತ್ತೆ ನಮ್ಮ ರಾಜ್ಯದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಏನು ಇದ್ದಾರೆ, ಅವರಲ್ಲಿ ಯಾರು ಬಡವರಿದ್ದಾರೆ, ಯಾರು ಕಷ್ಟಪಟ್ಟು ಓದುತ್ತಿದ್ದಾರೆ. ಅವರಿಗೆ merit pool ನಲ್ಲಿ ಜಾಸ್ತಿ seat add ಮಾಡುವಂಥ ಅನಿವಾರ್ಯತೆ ಇದೆ. ಇವತ್ತು ನಮ್ಮ Opposition Leader ರವರು ಹೇಳಿದ ಹಾಗೆ PG Courses, M.B.B.S., ನಲ್ಲಿ merit pool ನಾವು ಜಾಸ್ತಿ ಎಷ್ಟು ಸೀಟುಗಳನ್ನು ತರುತ್ತೇವೆ. ಅದರಿಂದ ಖಂಡಿತವಾಗಿ ಇದರಲ್ಲಿ ಪಾಸ್ ಆಗಿರುವವರು Government Medical College ಗೆ ಬರಲು ಸಿದ್ಧರಾಗಿದ್ದಾರೆ. ಇದು ಅಷ್ಟೊಂದು ದೊಡ್ಡ ಪ್ರಮಾಣದ ಕೊರತೆಯಲ್ಲ. ಕೆಲವು pre-clinical, para-clinical ನಲ್ಲಿ ಸ್ವಲ್ಪ ಕೊರತೆ ಇರಬಹುದು. ಈಗ ಸಾಕಷ್ಟು ಜನರು PG ಮಾಡಿರುವವರು ಇದ್ದಾರೆ, ಅವರು ಬರುತ್ತಾರೆ. ನಾವು ಈಗ ಅವರಿಗೆ AICTE scale ಕೊಡುತ್ತಿದ್ದೇವೆ. ಆದ್ದರಿಂದ ಬಹಳಷ್ಟು ಜನರು ಬರುವುದಕ್ಕೆ ತಯಾರಿದ್ದಾರೆ,ಇದನ್ನು ಮಾಡಬೇಕೆನ್ನುವಂಥದ್ದು ಸರ್ಕಾರದ ಚಿಂತನೆ ಇದೆ. ಅದಕ್ಕಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂಥ ವಿಷಯ ಬಹಳ ಮಹತ್ವವಿದೆ, ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಶೀಲನೆ ಮಾಡುತ್ತದೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಯವರೆ, ಡಾಕ್ಟರ್‌ಗಳು ಮೆಡಿಕಲ್ ಕಾಲೇಜ್‌ಗಳಲ್ಲಿ service ಮಾಡಲಿ, deparment ನಲ್ಲಿ service ಮಾಡಲಿ, common scale ಮಡಿ. ಇವರು Medical College open ಮಾಡಿ, ಅವರಿಗೆ staff ಸಿಗಲಿಲ್ಲ, ಅವರಿಗೋಸ್ಕರ ದಿವಂಗತ ಡಾ: ವಿ.ಎಸ್. ಆಚಾರ್ಯರವರು ಇದ್ದಾಗ, ಹೊಸ scale ಮಾಡಿದರು. ಆಗ ಇಲ್ಲಿದ್ದವರೆಲ್ಲಾ ಅಲ್ಲಿಗೆ ಹೋಗಿ ಸೇರಿಕೊಂಡರು. ಅದಕ್ಕೆ ಅವರು ಅಲ್ಲೇ ಮಾಡಲಿ, ಇಲ್ಲೇ

ಮಾಡಲಿ common scale ಎಂದು ಮಾಡಿ. Because my experience,ಈಗ ನಾವು ಮುಖ ತೋರಿಸುವ ಹಾಗೆ ಇಲ್ಲ ಆ ಸ್ಥಿತಿ ಆಗಿದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ, ಆ ಅನುಭವ ನೋವಿನ ಹಿನ್ನೆಲೆಯೊಳಗೆ ತಾವು ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತಿದ್ದೀರಿ. ತಮ್ಮ ಜೊತೆಗೂ ಕೆಲವು ಸಂದರ್ಭಗಳಲ್ಲಿ ನಾವು ಹಂಚಿಕೆ ಮಾಡಿಕೊಂಡಿದ್ದೇವೆ. Medical Colleges ಗೆ staff ಸಿಗುವುದಿಲ್ಲ. For next ten years, you will not get qualified people. You have to attract them from market. ಮೊದಲು ನಾವೆಲ್ಲಾ ಕಲಿಯುವಾಗ Medical Colleges ನಲ್ಲಿ honorary doctors system ಇತ್ತು. ಅದನ್ನು ಬಿಟ್ಟು ಬೇರೆ alternative ಇಲ್ಲ. ಎಲ್ಲೋ ಒಂದು ಕಡೆಗೆ honorary doctors systemನ್ನು start ಮಾಡಬೇಕೆಂದು ಮಾಡುತ್ತೇವೆ. ಅದು ಮತ್ತೆ stop ಆಗುತ್ತದೆ. ಅದಕ್ಕೆ ಏಕೆ ಒತ್ತು ಕೊಡಬಾರದೆಂದು ಮಾನ್ಯ ಅಧ್ಯಕ್ಷರು ಆಗಾಗ ಮಾತನಾಡುತ್ತಿದ್ದರು. ಅದನ್ನು ಪರಿಶೀಲನೆಗೆ ಅರ್ಹವೇ ಎಂಬ ಬಗ್ಗೆ Medical Education ಮಂತ್ರಿಯವರು ಗಮನಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಬಡವರಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ. ಏನೆ ಪಕ್ಷ ವ್ಯವಸ್ಥೆ ಮಾಡಿ, ಇಲ್ಲವೆಂದರೆ ಕೊನೆಗಾಲದಲ್ಲಿ ಬೇರೆ ದಾರಿ ಇಲ್ಲದೇ ಅವನು ನಿಟ್ಟುಸಿರು ಬಿಡಬೇಕಾಗುತ್ತದೆಂಬ ಮಾತನ್ನು ಹೇಳುತ್ತಿದ್ದರು. ನಾನು ಆಗ ತಾನೆ ಸದನದ ಒಳಗೆ ಬರುತ್ತಿದ್ದೆ. ಗುಲ್ಬರ್ಗಾದ ಭಾರ್ಗವಿ ಕುಲಕರ್ಣಿ ಎಂಬ ಹುಡುಗಿ ಪಿ.ಯು.ಸಿ. ಅಂಕಪಟ್ಟಿಯನ್ನು ಕಳೆದುಕೊಂಡಿದ್ದಾಳೆ. ಈ ಹುಡುಗಿ immediate ಆಗಿ ಕಾಲೇಜ್ ಸೇರಬೇಕು. ಈ ಹುಡುಗಿ ಪಿ.ಯು.ಸಿ. ಅಂಕಪಟ್ಟಿ ಬೇಕೆಂದು ಇಲ್ಲಿಗೆ ಬಂದಿದ್ದಾಳೆ. ಇಲ್ಲಿ ದ್ವಿತೀಯ ಪ್ರಮಾಣ ಪತ್ರ ಶುಲ್ಕ 1,000 ರೂ.ಗಳು, ತ್ರಿಪ್ರತಿ ಪ್ರಮಾಣಪತ್ರ ಶುಲ್ಕ 2,000 ರೂ.ಗಳು, ತತ್ಕಾಲ್ ಅಂದರೆ ಅರ್ಜಿ ನೀಡಿದ ದಿವಸವೇ ಅಂಕಪಟ್ಟಿಯನ್ನು ನೀಡಲು 5,000 ರೂ.ಗಳು ನಿಗದಿಯಾಗಿದೆ. ಈ ಹುಡುಗಿ ಬಾಗಿಲಲ್ಲಿ ನಿಂತು ಈ ಅರ್ಜಿಯನ್ನು ಕೊಟ್ಟಳು, ಇದು ಬಡವರ ಮಕ್ಕಳ ಸ್ಥಿತಿ, ನಾನು ಇಡೀ ಪಿ.ಯು.ಸಿ ಪಾಸ್ ಮಾಡಲು ಖರ್ಚು ಮಾಡುವುದಕ್ಕೆ ನಮ್ಮ ಅಪ್ಪ-ಅಮ್ಮನಿಗೆ ಶಕ್ತಿ ಇರಲಿಲ್ಲ. ನಾನು police

complaint ಕೊಟ್ಟಿದ್ದೇನೆ, ನಾನು Xerox ಮಾಡಿಸಲು ಹೋದ ಸಂದರ್ಭದಲ್ಲಿ ಅಂಕಪಟ್ಟಿ ಕಳೆದು ಹೋಯಿತು. ಈಗ ಈ ಹುಡುಗಿ ಕಾಲೇಜ್ ಸೇರಬೇಕು. ಎಂದು ಅರ್ಜಿ ಕೊಟ್ಟು ಹೇಳಿದಳು.

ಅಧ್ಯಕ್ಷರು : ಇದು ಖಾಸಗಿಯವರು ಹೇಳಿದ್ದಾರ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸದನಕ್ಕೆ ಬರುವಾಗ ಭಾರ್ಗವಿ ಕುಲಕರ್ಣಿ ಎಂಬ ಹುಡುಗಿ ಅರ್ಜಿಯನ್ನು ಕೊಟ್ಟಳು.

ಅಧ್ಯಕ್ಷರು : ಅಲ್ಲ, feeಗಳನ್ನು ನಿಗದಿ ಮಾಡಿರುವವರು ಯಾರು?

ಶ್ರೀ ಬಿ.ಎಸ್. ಯಡಿಯೂರಪ್ಪ : PU Board ನವರೆ ತಕ್ಷಣಕ್ಕೆ marks card ಬೇಕೆಂದರೆ 5,000 ರೂ.ಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು : ಅವರು ಹೇಳಿದ ಪ್ರಕಾರ ಖಾಸಗಿ ಕಾಲೇಜುನವರು ಹೇಳಿದ್ದಾರಾ ಅಥವಾ ಸರ್ಕಾರಿ ಕಾಲೇಜ್‌ನವರು ಹೇಳಿದ್ದಾರ?

ಶ್ರೀ ಬಿ.ಎಸ್. ಯಡಿಯೂರಪ್ಪ : PU Board ನವರು ತಕ್ಷಣ ಅಂಕಪಟ್ಟಿ ಬೇಕೆಂದರೆ 5,000 ರೂಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಕ್ಷಣವೇ ಮಾರ್ಕ್ಸ್ ಕಾರ್ಡ್ ಬೇಕೆಂದರೆ ಪಿ.ಯು. ಬೋರ್ಡ್‌ನವರಿಗೆ ಐದು ಸಾವಿರ ರೂಪಾಯಿಗಳನ್ನು ಕಟ್ಟಬೇಕಂತೆ. ಅದನ್ನು ಪ್ರಿಂಟ್ ಮಾಡಿ ಹೇಳಿದ್ದಾರೆ. ಮುಖ್ಯಮಂತ್ರಿಗಳ ಮತ್ತು ಸಂಬಂಧಪಟ್ಟ ಶಿಕ್ಷಣ ಸಚಿವರ ಗಮನಕ್ಕೆ ನಾನು ತರುತ್ತೇನೆ. ಈಗಾದರೂ ತಕ್ಷಣ ಇದರ ಬಗ್ಗೆ ಗಮನ ಕೊಟ್ಟು ಏನಾದರೂ ಮಾಡಿ ಕಡಿಮೆ ಮಾಡಿ. ಯಾರೋ ಒಬ್ಬ ಬಡ ಹೆಣ್ಣುಮಗಳು ನನ್ನ ಗಮನಕ್ಕೆ ತಂದಿದ್ದಾಳೆ. ಹೀಗೆ ಮಾರ್ಕ್ಸ್ ಕಾರ್ಡ್ ಕಳೆದುಕೊಂಡಂಥ ವ್ಯಕ್ತಿಗಳಿಗೆ ಒಂದು ನಾಮಿನಲ್ ಫೀಸ್ ತೆಗೆದುಕೊಂಡು ತಕ್ಷಣ ಮಾರ್ಕ್ಸ್ ಕಾರ್ಡ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳೇ, ಜಯಚಂದ್ರರವರೇ ಇದನ್ನು ನಿಮಗೆ ಕಳುಹಿಸಿ–ಕೊಡುತ್ತಿದ್ದೇನೆ, ದಯವಿಟ್ಟು ಇದನ್ನು ಸ್ವಲ್ಪ ನೋಡಿ.

ಶ್ರೀ ಪಿ.ಎಂ. ಅಶೋಕ ಪಟ್ಟಣ : ಇದನ್ನು ಮಾಡಿದ್ದು ಹಿಂದಿನ ಸರ್ಕಾರ, ನಾವಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾಡಿದ್ದು ಸರಿ ಎಂದು ಹೇಳುತ್ತಿಲ್ಲ. ನಿಮ್ಮ ಸರ್ಕಾರದ ಮೇಲೆ ನಾವು ಆರೋಪ ಮಾಡುತ್ತಿಲ್ಲ.

ಶ್ರೀ ಪಿ.ಎಂ. ಅಶೋಕ ಪಟ್ಟಣ : ನಾವೂ ಸಹ ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ. ನೀವು ಮಾಡಿದಿರಿ ಎಂದಷ್ಟೇ ಹೇಳಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜನ ನಿಮಗೆ ಅಧಿಕಾರ ಕೊಟ್ಟಿದ್ದಾರೆ, ಐದು ಸಾವಿರ ಇರುವುದನ್ನು ನಿಮ್ಮ ಕಾಲದಲ್ಲಿ ಕಡಿಮೆ ಮಾಡಿ ಪುಣ್ಯ ಕಟ್ಟಿಕೊಳ್ಳಿ!

(ಗೊಂದಲ)

ಶ್ರೀ ಪಿ.ಎಂ. ಅಶೋಕ ಪಟ್ಟಣ : ನೀವು ಮಾಡಿರುವ ಪಾಪಗಳನ್ನು ಕಳೆಯುವುದಕ್ಕೆ ನಾವು ಇಲ್ಲಿಗೆ ಬಂದಿರುವುದೇ?!

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಜನಪರವಾಗಿರುವಂಥ ವಿಚಾರಗಳನ್ನು ಯಡಿಯೂರಪ್ಪನವರು ಯಾವಾಗಲೂ ಪ್ರಸ್ತಾಪ ಮಾಡುತ್ತಾರೆ. ಅವರು ಇವತ್ತು ಬಹಳ ವಿಶೇಷವಾಗಿ ಪ್ರಸ್ತಾಪ ಮಾಡಿರುವುದನ್ನು ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ನಾನು ತಿಳಿದಿರುವುದೇನೆಂದರೆ, ಅಡ್ವಾನಿಯವರು ಬಿ.ಜೆ.ಪಿ.ಗೆ ರಾಜೀನಾಮೆ ಕೊಟ್ಟಿದ್ದರಿಂದ ಯಡಿಯೂರಪ್ಪನವರು ಇವತ್ತು ಬಹಳ ಖುಷಿಯಲ್ಲಿ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ!

ಅಧ್ಯಕ್ಷರು : ಅದೆಲ್ಲ ಈಗ ಬೇಡ, ಸುಮ್ಮಗೆ ಅನವಶ್ಯಕ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿ ಕಾನೂನು ಆಗಿದೆ, ಅದು ರಾಷ್ಟ್ರಪತಿಗಳಿಗೆ ಹೋಗಿದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಾತನಾಡುವ ಸಂದರ್ಭದಲ್ಲಿ ಹೇಳಿದರು. ಅದು ಒಪ್ಪಿಗೆಯಾಗಿ ಬಂದರೆ ಬಹಳ ಒಳ್ಳೆಯದು, ಅದರಿಂದ ಒಂದಷ್ಟು ಸಮಸ್ಯೆಗಳನ್ನು ಬಗೆಹರಿಸಬಹುದು. ಆದರೆ, ಶಿಕ್ಷಣ ಸಚಿವರು ಮತ್ತು ಆರೋಗ್ಯ ಸಚಿವರ ಗಮನದಲ್ಲಿದೆ ಎಂದು ನಾನು ಭಾವಿಸುತ್ತೇನೆ, ತಜ್ಞ ವೈದ್ಯರ ಕೊರತೆಯ ಸಂಖ್ಯೆ ಎಷ್ಟಿದೆಯೋ ಕರ್ನಾಟಕದಲ್ಲಿ ಅಷ್ಟು P.G. intake ಇಲ್ಲ. ಹಾಗಾಗಿ ಆ ಸಮಸ್ಯೆ ಬಗೆಹರಿಯುವುದಿಲ್ಲ. ಆ ದೃಷ್ಟಿಯಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಸರ್ಕಾರ ಲಿಬರಲ್ ಆಗಿ ಯೋಚನೆ ಮಾಡಿ ಪಿ.ಜಿ. ಸೀಟುಗಳನ್ನು ಹೆಚ್ಚು ಮಾಡಬೇಕು. ಅದು in-serviceನಲ್ಲಿ ಇರುವವರು ಆಗಬಹುದು ಅಥವಾ ಬರುವಂಥ ಹೊಸ ವೈದ್ಯರಿರಬಹುದು, ಅಂಥವರಿಗೆ

ಸೀಟುಗಳನ್ನು ಕೊಡಲು ನಮ್ಮ ಕೊರತೆ ಎಷ್ಟಿದೆ, ಅದಕ್ಕೆ match ಆಗುವ ನಂಬರ್‌ನಷ್ಟಾದರೂ ಸೀಟುಗಳನ್ನು ಹೆಚ್ಚು ಮಾಡಿದರೆ ತಜ್ಞಾ ವೈದ್ಯರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ. ಮಾನ್ಯ ಹೆಚ್.ಕೆ.ಪಾಟೀಲರು ಇನ್ನೊಂದು ಅಂಶವನ್ನು ಸರ್ಕಾರದ ಗಮನಕ್ಕೆ ತಂದರು. Honorarium ಕೊಟ್ಟು ವೈದ್ಯರನ್ನು ಕರೆಯಬೇಕೆಂದು ಹೇಳಿದರು. N.R.H.M. ಅಡಿಯಲ್ಲಿ ಆ ಸ್ಕೀಂ ಇದೆ. ಅನೇಕ ಸಲ ನಾವು hourly basis ಮೇಲೆ, patient basis ಮೇಲೆ ಬನ್ನಿ ಎಂದು ಕರೆಯುತ್ತಿದ್ದೇವೆ. ಆದರೂ ಸಹ ಪ್ರೈವೇಟ್‌ನಲ್ಲಿರುವ ಡಾಕ್ಟರ್‌ಗಳು ಯಾರೂ ಬರಲು ತಯಾರಿಲ್ಲ. ಹಾಗಾಗಿ, ಈ ಬಗ್ಗೆ ನಾವು ಬಹಳ ಗಂಭೀರವಾಗಿ ಯೋಚನೆಯನ್ನು ಮಾಡಬೇಕು. ಯಾರು ಪ್ರೈವೇಟ್ ಹಾಸ್ಪಿಟಲ್‌ಗಳಲ್ಲಿ ಸರ್ವೀಸ್ ಮಾಡುತ್ತಿದ್ದಾರೆ ಅವರೂ ಕೂಡ ಕಂಪಲ್ಸರಿಯಾಗಿ ಗವರ್ನಮೆಂಟ್ ಕರೆದಾಗ ಗಮರ್ನಮೆಂಟ್ ಡ್ಯೂಟಿಗೆ ಬರಬೇಕು ಎನ್ನುವ ಒಂದು ಕಾನೂನನ್ನು ತಂದರೆ ಮಾತ್ರ ಅದಕ್ಕೆ ಪರಿಹಾರ ಕಾಣಲು ಸಾಧ್ಯವಿದೆ. ಇದನ್ನು ಸಚಿವರು ದಯವಿಟ್ಟು ಗಮನಿಸಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಒಂದು ಸಲ ಮಂತ್ರಿಯಾಗಿಬಿಟ್ಟರೆ ಇದೇ ಕಷ್ಟ. ಅಧಿಕಾರಗಳು ಅವರಿಗೆ ಎಲ್ಲವನ್ನೂ ಹೇಳಿಕೊಟ್ಟು ಬಿಡುತ್ತಾರೆ. P.G., in-take, out-going, inflow ಎನ್ನುವುದನ್ನೆಲ್ಲ ಹೇಳಿಕೊಟ್ಟು ಬಿಡುತ್ತಾರೆ. ಅದಕ್ಕೇ ನಾನು ಏನೂ ಆಗಿಲ್ಲ! ಹೀಗಿದ್ದರೇ ಶುಭ್ರವಾಗಿರುತ್ತೇವೆ. ನಮ್ಮ ನೋವಿನ ಆಧಾರದ ಮೇಲೆ ಮಾತುಗಳು ಬರುತ್ತಿರುತ್ತವೆ. ಲಿಂಬಾವಳಿಯವರನ್ನು ನಾನು ಕೇಳುವುದು ಒಂದು simple thing. Demand and Supply ಈ P.G.seats ಗೆ ಕೋಟಿಗಟ್ಟಲೆ ಡಿಮ್ಯಾಂಡ್ ಆಗಿದೆ ಎಂದರೆ ಸಪ್ಲೈ ಕಡಿಮೆ ಇರುವುದರಿಂದ ಅಲ್ಲವೇ? You create on atmosphere where more number of post gradustes come out, ಹಾಗಾಗ ರೇಟ್ dip ಆಗುವುದಿಲ್ಲವೇ? ರೇಟ್ dip ಆದರೆ ನಮಗೇನು ಪ್ರಯೋಜನ? ಆದ್ದರಿಂದ, ಡಿಮ್ಯಾಂಡ್ ಹಾಗೆಯೇ ಇರಬೇಕು, dshort supply ಇರಬೇಕು!

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಡಿಮ್ಯಾಂಡ್ ಕಡಿಮೆ ಮಾಡಲು ಹೆಚ್ಚು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಎಂದು ಹೇಳುತ್ತಿದ್ದೀರಿ. ಅದನ್ನು ಸರ್ಕಾರ

ಮಾಡಲು ಆಗುವುದಿಲ್ಲ. ಅದಕ್ಕೆ All India Council for Medical Sciences ಇವರು ಪರ್ಮಿಷನ್ ಕೊಡಬೇಕಲ್ಲವೇ ಪಶು ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಬೆಳಗ್ಗೆ ನಾನು ಇಲ್ಲಿ ಒಂದು subject raise ಮಾಡಿದೆ. ಎಲ್ಲದಕ್ಕೂ ದೆಹಲಿಯಲ್ಲಿ ಕೊಕ್ಕೆ ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ನಾವು ಪ್ರಾರಂಭ ಮಾಡಿರುವ ಆರು ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಎಷ್ಟೆಷ್ಟು ತೊಂದರೆ ಕೊಟ್ಟಿದ್ದಾರೆ, ಶಿವಮೊಗ್ಗ ಕಾಲೇಜಿಗೆ ಏನು ತೊಂದರೆ ಕೊಟ್ಟಿದ್ದಾರೆ ಎನ್ನುವುದು ಬಹುಶಃ ಯಡಿಯೂರಪ್ಪನವರಿಗೂ ಗೊತ್ತಿರಬಹುದು. ಆದ್ದರಿಂದ, ಇಲ್ಲಿರುವ ಪ್ರಶ್ನೆಯೆಂದರೆ ಇದಕ್ಕೆ All India Medical Councilನವರು ಪರ್ಮಿಷನ್ ಕೊಡಬೇಕಾಗುತ್ತದೆ. ನಮಗೆ hurdles ಎಲ್ಲೆಲ್ಲಿ ಇದೆ ಎನ್ನುವುದನ್ನು ನಾವು ಮಾತನಾಡಬಹುದು. ಆದರೆ ಎಲ್ಲಿ ಚೈನ್ ಲಿಂಕ್ ಇದೆ, ಅದನ್ನು ಸರಿಪಡಿಸಲು ದೊಡ್ಡ ಮಟ್ಟದಲ್ಲಿ ಚರ್ಚೆಯಾಗಬೇಕು, ಇಲ್ಲಿ ಅದು ಸಾಲ್ವ್ ಆಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರ ಗಮನಕ್ಕೆ ಒಂದು ವಿಷಯವನ್ನು ತರಲು ಇಷ್ಟಪಡುತ್ತೇನೆ. ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ಇದ್ದದ್ದು ಹತ್ತು ತಿಂಗಳಷ್ಟೇ ಅಲ್ಲವೇ? Government of India Labour Departmentನಲ್ಲಿ ಕಾರ್ಮಿಕರಿಂದ ತೆಗೆದುಕೊಂಡಿರುವ Provident Fund ಎನ್ನುವುದು ಇರುತ್ತದೆ. ದೇವೇಗೌಡರು ಅದರಿಂದ ಮೂರು ಸಾವಿರ ಕೋಟಿ ರೂಪಾಯಿಗಳನ್ನು draw ಮಾಡಿದರು. ಅದಕ್ಕೂ ಮೊದಲು ಯಾವ ಪ್ರೈಮ್ ಮಿನಿಸ್ಟರ್‌ರವರೂ ಅದರ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ. ಅದನ್ನು ಅವರು divert ಮಾಡಿದರು. it was for some common good.Government of India ಸಹ ನಮ್ಮದೇ ಅಲ್ಲವೇ? ಆನ ಪ್ರತಿನಿಧಿಗಳದ್ದೇ ಅಲ್ಲವೇ? ಅವರೇನು ದೇವಲೋಕದಿಂದ ಬಂದಿದ್ದಾರೆಯೇ? We have to share it ಎನ್ನುವುದನ್ನು ಕೇಳಬೇಕಾಗುತ್ತದೆ. ಎಲ್ಲರಿಗೂ ಇದೇ difficulty ಇರುತ್ತದೆ. ನಾನು ಏನು ಹೇಳುವುದುಕ್ಕೆ ಹೊರಟಿದ್ದೇನೆ ಎಂದರೆ ಒಂದು ಚಿಕ್ಕ ವ್ಯೂಹವನ್ನು ರಚನೆ ಮಾಡಿಕೊಂಡು, ತಾವು ಎಲ್ಲವನ್ನೂ ದೂರದಿಂದ, ಬಹಳ ಜಾಣತನದಿಂದ ನಿಯಂತ್ರಣ ಮಾಡಿ ತಮಗೆ ಈ ಬೇಡಿಕೆಯನ್ನು ಅವರು

ಇಟ್ಟುಕೊಂಡಿದ್ದಾರೆ. ಇದನ್ನು ನಾವು ಭೇದಿಸಬೇಕು. ಇಲ್ಲದಿದ್ದರೆ ಪ್ರಯೋಜನವಿಲ್ಲ. ಎಲ್ಲ ಕಡೆಯೂ Primary Health Centers ಇವೆ. ಕಾರ್ಗಲ್‌ನಲ್ಲೂ Primary Health Centers ಇದೆ. ಅಧ್ಯಕ್ಷರೆ, ನಿಮ್ಮಲ್ಲೂ ಇದೆ. ನಮ್ಮ ಊರ ಹುಡುಗನೇ ನಿಮ್ಮಲ್ಲಿ ಕೆಲಸ ಮಾಡುತ್ತಿದ್ದಾನೆ.

ಅಧ್ಯಕ್ಷರು : ಈಗ ಅವನು ಅಲ್ಲಿ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮೊನ್ನೆ ನೀವು ಏನೋ ಅಂದಿರಿ ಎಂದು ಬೇಜಾರು ಮಾಡಿಕೊಂಡು ಬಂದು ಬಿಟ್ಟಿದ್ದಾನೆ! ಅವನನ್ನು ವಾಪಸ್ಸು ಕಳುಹಿಸುತ್ತೇನೆ. ಆ Primary Health Centersಗಳಲ್ಲಿ ಹತ್ತು ಜನರಿಗೆ ಆಗುವಷ್ಟು ಒಂದು ಚಿಕ್ಕ ಮೆಟರ್ನಿಟಿ ವಾರ್ಡ್ ಮಾಡಿ, ಒಬ್ಬ ಗೈನಕಾಲಜಿಸ್ಟ್‌ಅನ್ನು ಅಲ್ಲಿಗೆ ಪೋಸ್ಟ್ ಮಾಡಿದರೆ ಆ ಪ್ರದೇಶದ ಜನರಿಗೆ ಎಷ್ಟೊಂದು ಪ್ರಯೋಜನವಾಗುತ್ತದೆ. ಜನ ಪ್ರತಿನಿಧಿಗಳಾದವರಿಗೆ ಈ ರೀತಿಯ ಆಲೋಚನೆಗಳು ಮೂಡಿ ಬರಬೇಕು. ನಾನು ಹುಟ್ಟಿದ್ದು ಎಲ್ಲಿ, ಬೆಳೆದದ್ದು ಎಲ್ಲಿ, ಯಾವ ಸಮಾಜದ ಜನ, ಯಾವ ಸಮೂಹ ನನ್ನನ್ನು ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ, ಆದ್ದರಿಂದ ಇದೆಲ್ಲವನ್ನೂ ನಾನು ಅನುಭವಿಸುತ್ತಿದ್ದೇನೆ, ಅವರ ಧ್ವನಿಯಾಗಿ ನಾನು ಇಲ್ಲಿ ಮಾತನಾಡಬೇಕು, ಕೆಲಸ ಮಾಡಬೇಕು ಎನ್ನುವುದು ಇವರಿಗೆ ಇರಬೇಕು. ಬೇರೆ ಸಮಸ್ಯೆಗಳೂ ಸಹ ಇವೆ, ನಾನೇನು ಇಲ್ಲ ಎಂದು ಹೇಳುತ್ತಿಲ್ಲ. ಇದು ಬಹಳ straight road, National Highway ಹೊಡೆದುಕೊಂಡು ಹೋಗಬಹುದು ಎಂದು ನಾನು ಹೇಳುತ್ತಿಲ್ಲ. ಅದನ್ನು ಸಾಲ್ವ್ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲಲ್ಲವೇ ನಿಮಗೆ ಸಮಸ್ಯೆ ಏನು ಎನ್ನುವುದು ಗೊತ್ತಾಗುವುದು ಮತ್ತು ಆಲೋಚನೆ ಬರುವುದು. ಅದನ್ನು ಅಲ್ಲಿಗೆ ಬಿಡುತ್ತೇನೆ.

ಇನ್ನು ಅಗ್ರಿಕಲ್ಚರ್ ಬಗ್ಗೆ ಹೇಳುವುದಾದರೆ, ಇದು ಎಲ್ಲರೂ ಹೇಳಿರುವ ಹಾಡೇ, ಹೊಸದೇನೂ ಅಲ್ಲ. ನಾನು ಬೆಳಗ್ಗೆ ಎದ್ದು ಬೀಡಿ ತೆಗೆದುಕೊಳ್ಳಬೇಕಾದರೆ, ಸಿಗರೇಟ್ ತೆಗೆದುಕೊಳ್ಳಬೇಕಾದರೆ ಅದಕ್ಕೆ fixed price. ಅಂಗಡಿಗೆ ಹೋಗಿ ಚಹಾ ಕುಡಿಯಬೇಕಾದರೆ ಅವರು ಹೇಳಿದ fixed price ಅನ್ನೇ ಕೊಡಬೇಕು. ಒಂದು ಬಾಚಣಿಗೆ ತೆಗೆದುಕೊಳ್ಳಬೇಕಾದರೂ ಅದಕ್ಕೆ fixed price. ನಾನು ಬಾರ್ಬರ್ ಶಾಪಿಗೆ ಹೋದರೆ ಕಟಿಂಗಾ, ಷೇವಿಂಗಾ

ಅಥವಾ ಎರಡನ್ನೂ ಮಾಡಿಸಿಕೊಳ್ಳುವಿರಾ ಎಂದು ಕೇಳುತ್ತಾನೆ, ಏಕೆಂದರೆ ಅದಕ್ಕೆ ರೇಟ್ ಹೇಳಬೇಕು. ಆದರೆ ನಾನು ಬೆಳೆದ ಈರುಳ್ಳಿಗೆ, ಟೊಮ್ಯಾಟೊಗೆ, ಸೌತೆಕಾಯಿಗೆ, ಮೂಲಂಗಿಗೆ ರೇಟನ್ನು ಫಿಕ್ಸ್ ಮಾಡುವ ಅಧಿಕಾರ ನನಗಿಲ್ಲ. ಬಹುಶಃ ಪ್ರಪಂಚದಲ್ಲಿ ಇಂಥ ಒಂದು ದರಿದ್ರಾವಸ್ಥೆ ಮತ್ತು ವಿಚಿತ್ರಾವಸ್ಥೆ ಇನ್ನೆಲ್ಲೂ, ಯಾವ ವರ್ಗಕ್ಕೂ ಇಲ್ಲ. ಅವನ ಒಡವೆಗೆ ಅವನು ಮಾಲೀಕನಲ್ಲ. ಅವನ ಇಡೀ ಕುಟುಂಬವೆಲ್ಲ ಹೋಗಿ ಬೆವರು ಸುರಿಸಿ ದುಡಿದು ಬೆಳೆದಿದ್ದರೂ ಕೂಡ ಅವನ ಕಷ್ಟಕ್ಕೆ ಬೆಲೆಯಿಲ್ಲ. ಅದು ಪೇಟೆಗೆ ಬಂದು ಮೇಲೆ ನಾವು ಹೇಳಿದ ಅವನು ಸೊಪ್ಪು ಮಾರಬೇಕು, ನಾವು ಹೇಳಿದ ರೇಟಿಗೆ ಅವನು ತರಕಾರಿ ಕೊಡಬೇಕು. ನಾನು ಇದೆಲ್ಲವನ್ನೂ ಲಂಬಿಸಿಕೊಂಡು ಹೋಗುವುದಿಲ್ಲ. ಈ ದುರವಸ್ಥೆ ತಪ್ಪಬೇಕು. ಈ ವಿಷಯವನ್ನು ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲೂ ಹೇಳಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲೆಯಲ್ಲಿ ಬೆಳೆಯತಕ್ಕಂಥ ಎಲ್ಲ ಕೃಷಿ ಉತ್ಪನ್ನಗಳಗಳಿಗೆ ಬೆಲೆ ನಿಗದಿ ಮಾಡಲು ರೈತರಿಂದ ಕೂಡಿರುವಂಥ ಒಂದು ಸಮಿತಿ ಆರು ತಿಂಗಳಿಗೋ, ಒಂಭತ್ತು ತಿಂಗಳಿಗೋ ಒಂದು ಸಲ ಸಭೆ ಸೇರಲಿ. ಆ ಸಮಿತಿಯಲ್ಲಿ ಒಬ್ಬ ಜಿಲ್ಲಾಧಿಕಾರಿ ಇರಲಿ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಒಬ್ಬ ಆಫೀಸರ್ ಸಹ ಇರಲಿ. ಒಂದೊಂದು ಪದಾರ್ಥಕ್ಕೂ ಕೂಡ ಬಂಡವಾಳವನ್ನು ರೈತನು ಎಷ್ಟು ಹಾಕಬೇಕಾಗುತ್ತದೆ. ಅದರ ಮೇಲೆ ಯಾವ ರೇಟ್‌ಗೆ ಮಾರಿದರೆ ರೈತನಿಗೆ ನಷ್ಟವಾಗುವುದಿಲ್ಲ. ಎಂಬುದನ್ನು ಆ ಸಮಿತಿಯೊಳಗಡೆ ತೀರ್ಮಾನ ಮಾಡಬೇಕು. ಇದರ ಬಗ್ಗೆ 6 ಮತ್ತು 9 ತಿಂಗಳಿಗೊಮ್ಮೆ ಈ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು. ಆ ಬೆಲೆಯನ್ನು ಸರ್ಕಾರದ ಬೆಲೆ ಎಂದು ಘೋಷಣೆ ಮಾಡಬೇಕು. ವ್ಯಾಪಾರಸ್ಥನು ಬಂದು ನಾನು ಕೊಳ್ಳುವುದಿಲ್ಲವೆಂದು ಹೇಳಿದರೆ ಸರ್ಕಾರವು ಅದನ್ನು ಖರೀದಿ ಮಾಡುವುದಕ್ಕೆ ತಯಾರು ಇರಬೇಕು. ಆಗ ರೈತನು ನೆಮ್ಮದಿಯಿಂದ ನಿಟ್ಟುಸಿರುಬಿಡುತ್ತಾನೆ. ನಾಳೆ ದಿವಸ ನೀರಿನ ವಿಚಾರ ಬಂದಾಗ ಪ್ರಸ್ತಾಪ ಮಾಡುತ್ತೇನೆ. ನಮ್ಮಲ್ಲಿ ಬೇಸಿಗೆ ಕಾಲ ಬಂದಾಗ ಕರೆಂಟ್ ಇರುವುದಿಲ್ಲ. ಈಗ ಟೊಮ್ಯಾಟೋಗೆ ರೇಟ್ ಬರುತ್ತದೆ. ರೈತನು ರಾತ್ರಿಯೆಲ್ಲಾ ಕರೆಂಟ್ ಬರುತ್ತದೆ ಎಂದು ಅಲ್ಲಿ ಕಾಯುತ್ತಿರುತ್ತಾನೆ. ನಾಲ್ಕು ಕಡೆಯಿಂದ stock ಬಂತು ಎಂದಾಕ್ಷಣ ಈಗ cellphone ಗಳು ಬಂದಿದೆಯಲ್ಲಾ ಅದರಿಂದ stock ಜಾಸ್ತಿ ಬರುತ್ತಿದೆ ಎಂದು 10 ನಿಮಿಷದಲ್ಲಿ ವ್ಯಾಪಾರಸ್ಥರು ಮಾತನಾಡಿ–

ಕೊಂಡುಬಿಡುತ್ತಾರೆ. ಅವರೆಲ್ಲರೂ ಬಿಹಾರದಿಂದ stock ಬಂದಿದೆ ಎಂದು ಮಾತನಾಡಿಕೊಂಡು rate ಅನ್ನು ಇಳಿಸಿಬಿಡುತ್ತಾರೆ. ನಮ್ಮ ರೈತ ಮುಗಿದು ಹೋಗುತ್ತಾನೆ. ರೈತನು ತಿರುಪತಿಗೋ, ಮದ್ರಾಸ್ಗಿಗೋ, ಕಂಚಿಗೋ tomato ಅನ್ನು ಹೊತ್ತುಕೊಂಡು ಹೋಗಿರುತ್ತಾನೆ. ಅಲ್ಲಿ ವ್ಯಾಪಾರಸ್ಥ ರೇಟ್ ಅನ್ನು ಇಳಿಸಿಬಿಡುತ್ತಾನೆ. tempoದವನು ಬಾಡಿಗೆ ಹಣ ಕೊಡಿ ಎಂದು ಕೇಳುತ್ತಾನೆ. ಅದನ್ನು ಮಾರಾಟ ಮಾಡಿದರೆ ಟೆಂಪೋ ಬಾಡಿಗೆಗೂ ಸಾಕಾಗುವುದಿಲ್ಲ. ಅವನು ವಾಪಸ್ಸು ಬಂದರೆ ಇಲ್ಲಿ ಮಾಡಿರುವಂತಹ ಸಾಲವನ್ನು ತೀರಿಸಬೇಕು. ಇಲ್ಲ. ಹೋಗುವುದಕ್ಕೆ ಮೊದಲೇ ಗೊತ್ತಾದರೆ ಹಣ್ಣನ್ನು ತೆಗೆದು ಬೀದಿಗೆ ಚೆಲ್ಲಬೇಕು. ಇಲ್ಲಿ ಗಲಾಟೆಯಾದಾಗ support price declare ಮಾಡಿರುವುದನ್ನು ಬಿಟ್ಟರೆ ಸಾಮೂಹಿಕವಾಗಿ ಎಲ್ಲಾ ಕೃಷಿ ಉತ್ಪನ್ನಗಳಿಗೆ ರೈತನು ನೆಮ್ಮದಿಯಿಂದ ನಿಟ್ಟುಸಿರು ಬಿಡುವುದಕ್ಕೆ ಒಂದು ಬೆಲೆಯನ್ನು ನಿಗದಿ ಮಾಡುವಂತಹ ವ್ಯವಸ್ಥೆ ಇವತ್ತಿಗೂ ಬರಲಿಲ್ಲ. ನಮ್ಮ who is who ತೆಗೆದುನೋಡಿ ಇಲ್ಲಿ ಇರುವಂತಹರೆಲ್ಲರೂ agriculturists, barring 10% ಹಾಗಾದರೆ ಇಲ್ಲಿ ಯಾರು ಆಡಳಿತವನ್ನು ನಡೆಸುತ್ತಿದ್ದಾರೆ? ಇಲ್ಲಿ ಇರುವವರೆಲ್ಲರೂ ರೈತರೇ ಆಗಿದ್ದಾರೆ. ಎಲ್ಲರೂ ಕೃಷಿಕ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಅವನಿಗೆ ಈ ಮಾತ್ರ ಕನಿಷ್ಠ ಭದ್ರತೆಯನ್ನು ಮೂಡಿಸುವುದಕ್ಕೆ ನಿಮಗೆ ಅಗಲಿಲ್ಲವೆಂದರೆ ಇಲ್ಲಿ ಆಡಳಿತವನ್ನು ಯಾರು ನಡೆಸುತ್ತಿದ್ದಾರೆ? ಈ ಅಗೋಚರ ಶಕ್ತಿಗಳನ್ನು ನಿಗ್ರಹಿಸಬೇಕಾಗಿದೆ. ಇಲ್ಲಿ ಜನಶಕ್ತಿಯು ವಿಜೃಂಭಿಸಬೇಕಾಗಿದೆ. ಜನರ ಧ್ವನಿಯು ಅಲ್ಲಿ ಮೊಳಗಬೇಕಾಗಿದೆ. ಸರ್ಕಾರ ಈ ಜನರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ? ಬಹುಶಃ 1917ರ October ತಿಂಗಳಲ್ಲಿ ರಷ್ಯಾದಲ್ಲಿ ಕ್ರಾಂತಿಯಾದ ಮೇಲೆ, ಲೆನಿನ್‌ಗ್ರಾಡ್ ದುರಂತವಾದ ಮೇಲೆ, 1932ನೇ ಇಸವಿಯಲ್ಲಿ ಮೊದಲನೇ ಬಾರಿಗೆ Soviet Unionನಲ್ಲಿ ಬೆಲೆಯನ್ನು ನಿಗದಿ ಮಾಡುವಂತಹ ವ್ಯವಸ್ಥೆಯು ಜಾರಿಗೆ ಬಂತು. Michael Gorbachev ರವರ ದುಸ್ಸಾಹಸ ಈ Perestroika ರೋಗ ಬಂತಲ್ಲ, ಅಲ್ಲಿ Soviet Union Separate Secretariat ಆಯಿತು. ಆ system ಹೋಯಿತು. ಇದು ಪ್ರಪಂಚದಲ್ಲಿ ಎಲ್ಲೂ ಕೂಡ ಬರಲಿಲ್ಲ. ಬಹುಶಃ ಈ ಸರ್ಕಾರ ನನ್ನ ದಿವಂಗತ ಸ್ನೇಹಿತರ ಮಗ, ನಮ್ಮ ಹುಡುಗ ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದಾನೆ. ಆತನಿಗೆ ನಮ್ಮ

ಸಂಪೂರ್ಣ ಸಹಕಾರ ಮತ್ತು ಆರ್ಶಿವಾದ ಇರುತ್ತದೆ. ಆತನ ತಂದೆ ರೈತ, ರೈತ ಎಂದು ಹೇಳಿಯೇ ತನ್ನ ಪ್ರಾಣವನ್ನು ಬಿಡುವ ದಿವಸವೂ ಕೂಡ ರೈತರ ಹಿತೈಶಿಯಾಗಿಯೆ ಪ್ರಾಣವನ್ನು ಬಿಟ್ಟಿದ್ದಾರೆ. ಈ ಒಂದು ಕೆಲಸವನ್ನು ನೀವು ತ್ವರಿತಗತಿಯಲ್ಲಿ ಮಾಡಿದರೆ ಸಂಸದೀಯ ಸರ್ಕಾರ ಪದ್ಧತಿ ಇರುವಂತಹ ದೇಶಗಳಲ್ಲಿ ದೊಡ್ಡ ಕ್ರಾಂತಿಯನ್ನು ಮಾಡಿದಂತಾಗುತ್ತದೆ. ನಿಮಗೆ it will be a land mark, ಮಾಡಬೇಕು, ಮಾಡುತ್ತಾರೆಂದು ವಿಶ್ವಾಸವನ್ನಿಟ್ಟುಕೊಂಡಿದ್ದೇನೆ. ಅದೇ ರೀತಿಯಾಗಿ famine relief, ಮಳೆ ಬಾರದೆ ಹೋದರೆ ನಾನು ಏನು ಮಾಡುವುದಕ್ಕಾಗುತ್ತದೆ? ನಾನು ಒಬ್ಬ ರೈತ, ನಾನು rain shadow areaಗೆ ಬರುತ್ತೇನೆ. ನನಗೆ ಮಳೆ ಆಗದೆ ಬೆಳೆ ಬಾರದೆ ಹೋದರೆ ನಾನು ಏನು ಮಾಡಬೇಕು? ಸರ್ಕಾರಿ ನೌಕರಿಗೆ, undertakingsನಲ್ಲಿರುವವರಿಗೆ, private companyಯಲ್ಲಿ ಕೆಲಸ ಮಾಡುವವರಿಗೆ gratuity ಇದೆ, provident fund ಇದೆ, death relief ಇದೆ, compensation ಇದೆ, medical allowance ಇದೆ. ಎಲ್ಲಾ facilities ಇದೆ, ನನಗೆ ಜಮೀನು ಬಿಟ್ಟರೆ ಬೇರೆ ಏನೂ ಗತಿ ಇರುವುದಿಲ್ಲ. ನನಗೆ ಸ್ವಂತ ಯಾವುದೇ irrigation facility ಇರುವುದಿಲ್ಲ. ನಾನು ಮಳೆಯನ್ನೇ ನಂಬಿಕೊಂಡಿದ್ದೇನೆ. ಸಕಾಲಕ್ಕೆ ಮಳೆ ಬರಲಿಲ್ಲ ಬೆಳೆಯಾಗಲಿಲ್ಲ. ನಾನು suggest ಮಾಡುತ್ತೇನೆ. Per acre ಇಷ್ಟೆಂದು ಹೇಳಿ ಅವನು ಏನು ಬೆಳೆಯನ್ನು ತೆಗೆಯಬಹುದಾಗಿತ್ತು ಏನು ಸಂಪಾದನೆಯನ್ನು ಮಾಡಬಹುದಾಗಿತ್ತು ಅದನ್ನು ಅಂದಾಜು ಮಾಡಿ ಆ ರೈತನಿಗೆ ಭೂಪರಿಹಾರ ಎಂದು ಕೊಡಬೇಕು. ಅವನಿಗೆ ಬಾಕಿ ಇರುವಂತಹ ಯಾವುದೇ ಸಾಲವನ್ನು ವಸೂಲಿ ಮಾಡುವುದನ್ನು ತಡೆಯಬೇಕು. ಅವನ ಮಕ್ಕಳು ಯಾರು ಶಾಲಾಕಾಲೇಜುಗಳಿಗೆ ಓದುತ್ತಿರುತ್ತಾರೆ. famine ಬಂದ ವರ್ಷಗಳಲ್ಲಿ ಅವರಿಂದ ನೀವು feesಯನ್ನು ವಸೂಲು ಮಾಡುವಹಾಗಿಲ್ಲ. ಈಗ ನನ್ನ ಮಗ ಇರತ್ತಾನೆ, ಅವನಿಗೆ Government quota private medical collegeನಲ್ಲಿ MBBS seat ಅನ್ನು ಕೊಟ್ಟಿರುತ್ತಾರೆ. ನನಗೆ ಜಮೀನು, ಮಳೆ ಬಿಟ್ಟರೆ ಏನೂ ಗತಿ ಇರುವುದಿಲ್ಲ. ನಾನು fail ಆದೆ. minimum fee ಏನೂ ಅಲ್ಲಿ ಕಟ್ಟುವುದು ಇರುತ್ತದೆ. 8 ರಿಂದ 20 ಸಾವಿರ ರೂಪಾಯಿಗಳನ್ನು ಕಟ್ಟುವಂತಹದಕ್ಕೂ ಕೂಡ ಯೋಗ್ಯತೆ ಅವರಿಗೆ ಇರುವುದಿಲ್ಲ.

ಇವೆಲ್ಲವೂ ಕೋಟ್ಯಾಂತರ ರೂಪಾಯಿಗಳು ಆಗುವುದಿಲ್ಲ. ನಾನು ಆಗಲೇ ಹೇಳಿದ್ದೇನಲ್ಲಾ ಬ್ಯಾಂಕಿನವರದ್ದು ಕೆ.ಎಸ್.ಐ.ಡಿ.ಸಿ. ನವರದ್ದೆಲ್ಲಾ ಲೆಕ್ಕ ಹಾಕಿದರೆ ಮಾನ್ಯ ಯಡಿಯೂರಪ್ಪನವರೆ ಇವೆಲ್ಲಕ್ಕೂ ಕೂಡ ದುಡ್ಡು ಸಿಗುತ್ತದೆ. ಆದರೆ ಇದನ್ನು ಮಾಡುವುದಕ್ಕೆ ಮನಸ್ಸು ಬೇಕು ಅಷ್ಟೇ ಶ್ರೀ ಕಾಮರಾಜನಾಡರ್ ರವರು ಪ್ರಾಣ ಬಿಟ್ಟಾಗ ಅವರು ಯಾವ ಅಧಿಕಾರದಲ್ಲಿರಲಿಲ್ಲ. Emergency ಅಣ್ಣಾ ದೊರೈ ಯವರಿಗೆ ಸೇರಿದಷ್ಟೇ ಜನರು ಕಾಮರಾಜನಾಡರ್ ರವರಿಗೂ ಸಹ ಸೇರಿತ್ತಾರೆ. ಕಾಮರಾಜನಾಡರ್‌ರವರ ಪಾರ್ಥಿವಶರೀರ ನೋಡುವುದಕ್ಕಾಗಿ ನೂಕುನುಗ್ಗಲಿನಲ್ಲಿಯೇ ಸುಮಾರು 10–15 ಜನರು ಸತ್ತುಹೋಗುತ್ತಾರೆ. ನಮ್ಮ ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯ ಜನನಾಯಕ ಎಂದರೆ ಅವನು ಜೀವಂತ ಇರುವಾಗ ತಾನು ಎಷ್ಟು ದೊಡ್ಡ ನಾಯಕ ಎಂದು ತಿಳಿದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಅವನ ಶವ ಯಾತ್ರೆ ಹೊರಟಾಗ ಅನರು ಏನು ಇರುತ್ತಾರೆ. ಅವರು ಜನತ್ತಿಗೆ ಸಾರಿ ಇವನು ನಮ್ಮ ನಾಯಕ ಇವನು ನಮ್ಮನ್ನು ಬಿಟ್ಟುಹೋದ ಎಂದು ಹೇಳುತ್ತಾರೆ. ಅದಕ್ಕಾಗಿ ನಾವು ಕಣ್ಣೀರು ಹಾಕುತ್ತಿದ್ದೇವೆಂದು ಹೇಳುತ್ತಾರೆ. ಇದು ನಮ್ಮ ಸಂಸ್ಕೃತಿಯಾಗಿದೆ. ಶ್ರೀ ಡಿ.ದೇವರಾಜ ಅರಸುರವರಿಗೂ ಕೂಡ ಅದೇ ಗೌರವವನ್ನು ಈ ರಾಜ್ಯದ ಜನರು ಕೊಟ್ಟಿದ್ದಾರೆ. ಏಕೆ ಈ ವಿಚಾರವನ್ನು ನಾವು ಭಾವುಕರಾಗಿ ಹೇಳುತ್ತಿದ್ದೇನೆಂದರೆ ಬಡವನಿಗೆ family relief ಕೊಡುವುದಾಗಲಿ ರೈತನಿಗೆ ಅವನ ಕೃಷಿ ಉತ್ಪನ್ನಗಳಿಗೆ ಬೆಲೆಯನ್ನು ನಿಗದಿ ಮಾಡುವುದಾಗಲಿ dialysis ಅನ್ನು ಪ್ರತಿ ತಾಲ್ಲೂಕಿನಲ್ಲಿಯೂ ಮಾಡುವುದಾಗಲಿ ಪ್ರತಿ ಜಿಲ್ಲೆಯೊಳಗಡೆ Super Speciality Hospital ಅನ್ನು Government ಮಾಡಿ free treatment ಕೊಡುವುದನ್ನು ಮಾಡಿದರೆ ನೀವು ಅವನ ಮನಸ್ಸಿಗೆ ಮಹಾರಾಜರಾಗಿ ಬಿಡುತ್ತೀರಿ. ನೀವು ಅವನ ಹೃದಯಸಿಂಹಾಸನಾಧೀ–ಶ್ವರರಾಗಿಬಿಡುತ್ತೀರಿ. ನಿಮಗೆ ಆ ಅವಕಾಶವಿದೆ ಅಧಿಕಾರ ನಿಮ್ಮ ಕೈಗೆ ಬಂದು ಸೇರಿದೆ. ಒಂದು ಘಳಿಗೆ ಅವಕಾಶವನ್ನು ಕಳೆದುಕೊಳ್ಳಬೇಡಿ. ನೀವು ಜನರ ಮನಸ್ಸಿನಲ್ಲಿ ಉಳಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಅವರಲ್ಲಿ ವಿನಂತಿಯನ್ನು ಮಾಡುತ್ತಾ Agricultural schools, medicalಗೂ ಸಹ ನಾನು ಇದನ್ನೇ ಹೇಳುತ್ತೇನೆ. ನಮ್ಮ ಹಳೆಯ LMP ಇತ್ತು. ಇದನ್ನು ಏತಕ್ಕಾಗಿ

ರದ್ದು ಮಾಡಿದರು ಯಾವಾಗ ರದ್ದು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನೀವು ಪುನಃ LMP ಯನ್ನು introduce ಮಾಡುವುದಾದರೆ MBBS craze ಕಡಿಮೆ ಮಾಡುವುದಾದರೆ ಅವರನ್ನು doctor ಎಂದು recognize ಮಾಡಿ. ಅವರನ್ನು rural areaಗಳಿಗೆ ಹಾಕುವುದಾದರೆ major problem is over. Agriculture Universityಯಲ್ಲಿ ನಮ್ಮ ಗ್ರಾಮೀಣ ಪ್ರದೇಶದಿಂದ ಬರುವಂತಹ ಮಕ್ಕಳು ಅನೇಕ ಜನರಿಗೆ ಅವರು ಬಯಸಿದ ಕೋರ್ಸುಗಳಿಗೆ ಸೀಟು ಸಿಗುವುದಿಲ್ಲ. ಇದಕ್ಕೆ ಕಾರಣವಿಷ್ಟೇ, CET ಈಗ ಬಂದಿದೆ. ಯಾರಿಗೆ BE, Meaical seat ಸಿಗುವುದಿಲ್ಲ. ಅವರೆಲ್ಲರೂ ರ್ಯಾಂಕಿಗೆ ಅನುಗುಣವಾಗಿ B.S.C. (Agri) ಹೊರಟುಹೋಗುತ್ತಾರೆ. ಅವರಿಗೆ B.S.C. (Agri),seat ಸಿಗುತ್ತದೆ. ಅವನು B.S.C. (Agri), ಯನ್ನು ಮಾಡುತ್ತಾನೆ. M.Sc ಅನ್ನು ಮಾಡುತ್ತಾನೆ. ಆಮೇಲೆ company ಗೆ manager ಆಗಿ ಹೋಗುತ್ತಾನೆ. ಅವನು ನಮಗೆ ವಾಪಸ್ಸು ಬರುವುದಿಲ್ಲ. ನನ್ನ ಮನವಿ ಸರ್ಕಾರಕ್ಕೆ ವಿಶೇಷವಾಗಿ ಕೃಷಿ ಮಂತ್ರಿಗಳಿಗೆ, High school level ನಲ್ಲಿ ನೀವು Agricultural University ನಲ್ಲಿರತಕ್ಕಂಥ–ಎಲ್ಲಾ allied subjectsನ್ನು optional subjects ಆಗಿ introduceಮಾಡಿ. ಯಾವು ಇಲ್ಲಿ electives ಆಗಿ ಅದನ್ನು ತೆಗೆದುಕೊಂಡಿರುತ್ತಾರೆ. ಅವರು ಮಾತ್ರ Agricultural Universityಗೆ PUC pass ಮಾಡಿಕೊಂಡು ಹೋದ ಮೇಲೆ eligible ಇರುತ್ತಾರೆ. ಆಗ ಏನಾಗುತ್ತದೆ. ಇರುವ ಎಲ್ಲಾ ಸೀಟು ಕೂಡ ಯಾರು ಕೃಷಿಕರ ಕುಟುಂಬದಿಂದ ಬರುತ್ತಾರೆ ಗ್ರಾಮೀಣ ಹಿನ್ನೆಲೆಯಲ್ಲಿ ಬರುತ್ತಾರೆ ಅವರಿಗೆ ಸಿಗುತ್ತದೆ. ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಈಗ Agricultural University ಎಂದು ಹೇಳಿ ಅವರ ಕೆಲಸ ಎಲ್ಲಾ ನೋಡಿ ಬಿಟ್ಟರೆ ಕೆಲವರಿಗೆ ಉದ್ಯೋಗಗಳನ್ನು ಕೊಡುವುದಕ್ಕೆ ನಾವು Universityಗಳನ್ನು ಇಟ್ಟುಕೊಂಡಿದ್ದೇವೆಂದು ಅನ್ನಿಸುತ್ತದೆ. ಒಂದು fencingಗೆ ಯಾರೋ ನಮ್ಮ ತಾತ ಮುತ್ತಾತನ ಕಾಲದಲ್ಲಿರುವಂಥ ಕತ್ತಾಳೆ ಬಿಟ್ಟರೆ ಇವತ್ತಗೂ alternative ಆಗಲಿ, improvement ಆಗಲಿ ಅವರು suggest ಮಾಡುವುದಕ್ಕೆ ಅವರ ಕೈಯಲ್ಲಿ ಆಗಿಲ್ಲ. ದಯಾಮಾಡಿ ಈ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ. Skilled training centres. ಈಗ ಮೂರು

ಮೂರು ಕಿ.ಮೀ. ಗೊಂದು ಹೈಸ್ಕೂಲ್ ಇವೆ. ನಮ್ಮ ಹುಡುಗರೆಲ್ಲಾ SSLC, PUC, Pass/Fail ಆಗಿಬಿಡುತ್ತಾರೆ. Election time ಇದ್ದಾಗ ಎಲ್ಲಾ ಸ್ವಲ್ಪ basy ಇರುತ್ತಾರೆ, ಏಕೆಂದರೆ ಎಲ್ಲಾ ಪಾರ್ಟಿಯವರು ಹಂಚಿಕೊಳ್ಳುತ್ತಾರೆ ಹೀಗಾಗಿ ಅವರಿಗೆ ಸ್ವಲ್ಪ ಕೆಲಸವಿರುತ್ತದೆ. Election ಆದಮೇಲೆ ಅವರಿಗೆ ಕೆಲಸವಿಲ್ಲ. ನೀವು ತಾಲ್ಲೂಕಿಗೊಂದಾದರೂ ಮಾಡಿ ಅಥವಾ ಜಿಲ್ಲೆಗೊಂದೆರಡಾದರೂ ಮಾಡಿ. ಈ ಗ್ರಾಮೀಣ ಯುವಕರು ಯಾರು ಇರುತ್ತಾರೆ ಆ stageವರೆಗೆ ಓದಿಕೊಂಡಿರುವಂಥವರಿಗೆ, ಬೆಂಗಳೂರಿನಲ್ಲಿರುಂಥ ಪ್ರತಿಷ್ಠಿತ ಸಂಸ್ಥೆಗಳು ಯಾವ್ಯಾವು ಇವೆ, IT/BT ಯಲ್ಲಿರತಕ್ಕಂಥ ಅನೇಕ ಜನ they have been very helpful to society. ನಮ್ಮ ಮೋಹನದಾಸ್ ಪೈ ಅವರಾಗಬಹುದು, ನಾರಾಯಣ ಮೂರ್ತಿಯವರಾಗಬಹುದು, ಇಂಥವರು ಯಾರಾದರೂ ಆಗಬಹುದು. ಅವರ ಸಹಭಾಗಿತ್ವ ತೆಗೆದುಕೊಳ್ಳಿ ಹುಡುಗರಿಗೆ ಹೆಣ್ಣುಮಕ್ಕಳಿಗೆ training ಕೊಡುವಂಥ skilled training Institutes–ಪ್ರಾರಂಭ ಮಾಡಿ. ಜಗತ್ತಿನಲ್ಲಿ ಎಲ್ಲೆಲ್ಲಿ ಯಾವ್ಯಾವ tradeಗೆ demand ಇದೆ ಎಂಬುದು ಅವರಿಗೆ ಗೊತ್ತಿದೆ. ಅದನ್ನು survey ಮಾಡಿ ನಮ್ಮ ಮಕ್ಕಳಿಗೆ training ಕೊಡಿ. Australia ದಲ್ಲಿ ನಾಳೆ Copper Mines open ಆಗುತ್ತದೆ, ಅಲ್ಲಿ ಕೆಲಸ ಬೇಕು operators ಬೇಕೆಂದರೆ ನಮ್ಮ ಹುಡುಗರು ಹೋಗುವುದಕ್ಕೆ ತಯಾರಾಗಿಬೇಕು. Gulf ನಲ್ಲಿ Oil wells ನಲ್ಲಿ ಕೆಲಸ ಮಾಡುವುದಕ್ಕೆ apprentice ಬೇಕಾಗಿದ್ದಾರೆಂದರೆ ಅದಕ್ಕೆ ಬೇಕಾಗಿರತಕ್ಕಂಥ training ನ್ನು ನಮ್ಮ ಹುಡುಗರು ಇಲ್ಲಿ ತೆಗೆದುಕೊಂಡು ಹೋಗುವುದಕ್ಕೆ ತಯಾರಾಗಿರಬೇಕು. ಪ್ರಸ್ತುತ ಕಾರ್ಮಿಕ ಇಲಾಖೆಯ ವತಿಯಿಂದ ನಡೆಸತಕ್ಕಂಥ IndustrialTraining Institutes ಎನಿವೆ ಅವು ಹೆಚ್ಚು ಪ್ರಯೋಜನಕಾರಿಯಲ್ಲ. ಈ Institutes, Skilled Institutes, ನ್ನು ನಮ್ಮ Government Tool Training Centres (GTTC) ಎಂದು ಏನು ಮಾಡಿದ್ದೀರಿ, ಅಥವಾ NTTF, Nettur Technlogical Training Foundation ಏನಿದೆ, ಆ lines ನಲ್ಲಿ ಮಾಡಿ. ನಮ್ಮ ಮಕ್ಕಳನ್ನು engage ಮಾಡಿ. Please provide them some opportunity in life. ಇದಕ್ಕೆ ಬಂಡವಾಳ ಕಡಿಮೆ ಹಾಕಿ Private ನವರನ್ನು ಕರೆದು you must

encourage these people ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ತಾವು ಏಕೋ restless ಆಗುತ್ತಿದ್ದೀರಿ. ನಿಮ್ಮ movements, body language ನೋಡಿದರೆ, ಏನಪ್ಪಾ ನೀನೆ ಹೀಗೆ ಮಾಡಿದರೆ ಹೇಗೆ? ಬೇಗ ಮುಗಿಸು ಎಂದು ಹೇಳುತ್ತಿರುವಂತಿದೆ. ನಾನು ಆ ಕಷ್ಟವನ್ನು ಅಲ್ಲಿ ಕುಳಿತು ಅನುಭವಿಸಿದ್ದೆನೆ. ನನಗೂ ಹೇಳುವ ಹಾಗೆ ಇಲ್ಲ. ಸುಮ್ಮನೆ ಇರುವ ಹಾಗೆ ಇಲ್ಲ, ಏನು ಮಾಡುವುದು ಇನ್ನು ಬಹಳ ವಿಚಾರಗಳು ಇದ್ದಾವೆ. ಇನ್ನೂ ಐದು ವರ್ಷದ ಟೈಂ ಇದೆ, ಮಾತನಾಡುವುದಕ್ಕೆ ಬೇರೆ ಅವಕಾಶ ಸಿಗುತ್ತದೆ, ನಿಮ್ಮನ್ನು ಮುಜಗುರಕ್ಕೆ ಸಿಕ್ಕಿಸುವುದು ಅಥವಾ ನೀವು ಆ ಬೆಲ್‌ನ್ನು ಮುಟ್ಟಿಕೊಳ್ಳುವುದು ನನಗೆ ಇಷ್ಟವಿಲ್ಲ. ಅಧ್ಯಕ್ಷತೆ, ನನಗೆ ಆ ಬೆಲ್ ಎಂದರೆ ಆಗುವುದಿಲ್ಲ. ನಾನು ಐದು ವರ್ಷದಲ್ಲಿ ಒಂದು ದಿವಸವೂ ಆ ಬೆಲೆ ಮುಟ್ಟಿರಲಿಲ್ಲ. ನಾನು ಬೆಲ್ ಮುಟ್ಟದೆ ಹಾಗೆ manage ಮಾಡಿಕೊಳ್ಳುತ್ತಿದೆ. ತನಗೆ ಎಷ್ಟೆ ಕಾಲದ ಮಿತಿ ಇದ್ದರೂ ಕೂಡ ಬಹಳ ದೊಡ್ಡ ಮನಸ್ಸಿನಿಂದ ನಮಗೆ ಹೆಚ್ಚು ಸಮಯ ಬಳಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, though I had lot of other things to speak I want to withhold myself. ಹಿರಿಯರಾದ ಯಡಿಯೂರಪ್ಪನವರು ಮಾತನಾಡುವ ವೇಳೆಯಲ್ಲಿ ನನ್ನ ಬಗ್ಗೆ ಸದ್ಭಾವನೆ ವ್ಯಕ್ತಪಡಿಸಿ ಎರಡು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಕುಮಾರಸ್ವಾಮಿ-ಯವರೂ ಆ ಗೌರವ ತೋರಿಸಿದ್ದಾರೆ. ನಾನು conclude ಮಾಡುವುದಕ್ಕೆ-ಮೊದಲು ಒಂದು ಮಾತು ಹೇಳಬೇಕಾಗಿದೆ. ಯಡಿಯೂರಪ್ಪ-ನವರು ಮಾತನಾಡುವಾಗ almost I was in tears. ನಮ್ಮ ಪರಿಚಯದ ಒಬ್ಬ ಮನುಷ್ಯರಿಗೆ, ನಾವೆಲ್ಲಾ ನಾಗರೀಕರು, ಅಂಥ ಘಟನೆಗಳು ಆಗಬೇಕೆಂದು ನಾವು ಬಯಸುವುದಿಲ್ಲ. ಯಾರಿಗೂ ಚಾರಿತ್ರ್ಯವಧೆ ಆಗಬಾರದು. ನನಗೆ ಇದು ಬಹಳ ಸಲ ಆಗಿಬಿಟ್ಟದೆ. ಬೆಳಗ್ಗೆ ಕೂಡ ಕುಮಾರಸ್ವಾಮಿಯವರು Public Service Commission ವಿಚಾರ ಬಂದಾಗ ಯಾರೋ ಎಲ್ಲೋ ಕುಳಿತು ಹೇಳಿದ್ದೆಲ್ಲಾ ಬರೆಸಿದರೆ ಹೇಗೆ ಎಂದು ಹೇಳಿದರು. ನಮ್ಮ ಪರಿಸ್ಥಿತಿಯೂ ಹಾಗೆ ಆಗಿಬಿಟ್ಟಿದೆ. ನಾನೊಂದು ಸ್ವಲ್ಪ ಜಮೀನು ಕೊಂಡುಕೊಂಡಿದ್ದೇನೆ. I am a purchaser. ಒಬ್ಬರಿಬ್ಬರ ಹತ್ತಿರ ಅಲ್ಲ. ಹತ್ತು-ಹದಿನೈದು ಜನರ ಹತ್ತಿರ ಬೇರೆ ಬೇರೆ ದಿನಗಳಲ್ಲಿ ಐವತ್ತು ವರ್ಷಗಳ ಹಿಂದೆ ಮಂಜೂರಾಗಿ ಏಳೆಂಟು ಜನರಿಗೆ

ವರ್ಗಾಯಿಸಿರತಕ್ಕಂಥ ಜಮೀನನ್ನು ಕೊಂಡು ಕೊಂಡಿದ್ದೇನೆ. ಆ ಜಮೀನು 1997 ರಲ್ಲಿ ಅರಣ್ಯ ಇಲಾಖೆಗೆ ಸೇರಿದೆಯಂತೆ. ಅವರು 1937 ರಿಂದ 2013 ರವರೆಗೆ ಆ ಕಡೆಗೆ ಬಂದೂ ಇಲ್ಲ. Survey ಮಾಡಿಸಿಕೊಂಡಿಲ್ಲ, demarcations ಇಲ್ಲ, ಅಥವಾ ಬೇರೆಯವರಿಗೆ ಮಂಜೂರಾದಾಗ ಅವರ ಅನುಭವದಲ್ಲಿದ್ದಾಗಲೂ ಇಲ್ಲ. ನಾನು ಒಬ್ಬ ಮುಟ್ಠಾಳ. ನಾನು ಏನು ಮಾಡಿದೆ ಎಂದರೆ, ನಾನು ಜಮೀನು ತೆಗೆದುಕೊಂಡ ಮೇಲೆ ಅದರ ಪಕ್ಕದಲ್ಲಿಯೇ ಜಮೀನು ಇತ್ತಲ್ಲ, ನಾನು ಸ್ವತಃ ಹೋಗಿ ಕೋಲಾರದ DFO ಗೆ ಅರ್ಜಿ ಕೊಟ್ಟು ಬಂದೆ. ನಾನು ಸಾರ್ವಜನಿಕ ಜೀವನದಲ್ಲಿ ಇದ್ದೇನೆ, ನಾನು ಇಲ್ಲಿ ಜಮೀನು ಖರೀದಿಸಿದ್ದೇನೆ, ನನ್ನ ಜಮೀನಿಗೆ ಹೊಂದಿಕೊಂಡಂತೆ ಅರಣ್ಯ ಜಮೀನು ಇದೆ. ಕೆಲವು ಕಡೆ ನಿಮ್ಮವರು ನನ್ನ ಸರಹದ್ದಿನೊಳಗೆ ಬಂದಾಗಿದೆ, ದಯಮಾಡಿ ನೀವು Joint Survey ಮಾಡಿಸಿ ನನಗೆ ಸರಹದ್ದನ್ನು ಗುರುತು ಮಾಡಿಕೊಡಿ ಎಂದು ನಾನು ಅವರಿಗೆ ಅರ್ಜಿ ಕೊಟ್ಟೆ. ಅದಾದ ಮೇಲೆ ಮೂರು ವರ್ಷ ಏನೂ ಇಲ್ಲ. ಅದಾದ ಮೇಲೆ ನಾನು TV On ಮಾಡಿದರೆ ಸಾಕು, ಮಾಜಿ ವಿಧಾನ ಸಭಾಧ್ಯಕ್ಷ ಅರಣ್ಯ ಒತ್ತುವರಿ. Charles Shobaraj ಮತ್ತು Veerappan ಅವರಿಗಿಂತ ನನ್ನನ್ನು ಹೀನವಾಗಿ ತೋರಿಸಿಬಿಟ್ಟರು. ಅವರ್ಯಾರೋ ಮಹಾನುಭಾವರು ಹೀರೆಮಠ್ ಸಾಹೇಬ್ರು ಎನ್ನುವವರು, ಈ ಕಬ್ಬಿಣದ ಅದಿರಿನ ವಿಚಾರದಲ್ಲಿ ಬಹಳ ದೊಡ್ಡ ಹೋರಾಟ ಮಾಡಿದ್ದಾರೆ, "ಪರಿವರ್ತನಾ ಸಮುದಾಯ" ಎಂದೋ ಎನೋ ಒಂದು title ಇದೆ. ಆತ ನನ್ನ ಮುಖ ನೋಡಿದ್ದಿಲ್ಲ. ಕುಮಾರಸ್ವಾಮಿಯವರೆ, ನಮ್ಮ ಊರಿಗೆ ಬಂದಿಲ್ಲ, ನನ್ನ ದಾಖಲೆಗಳನ್ನು ನೋಡಿಲ್ಲ, ನಾನು ಖರೀದಿದಾರನೆಂದು ಗೊತ್ತಿಲ್ಲ. ನಾನು ಅರಣ್ಯ ಒತ್ತುವರಿ ಮಾಡಿದ್ದಾನೆಂದು ಮೊನ್ನೆ ಕೂಡ ಹೇಳಿದ್ದಾರೆ. ಯಾವುದೋ ಒಂದು ಸಮೃದ್ಧವಾಗಿರತಕ್ಕಂಥ ಕಾಡನ್ನು ಹಾಡಹಗಲೇ ಜನರನ್ನು ಕಟ್ಟಿಕೊಂಡು ಹೋಗಿ tractor ಗಳನ್ನು ನಿಲ್ಲಿಸಿ ಎಲ್ಲಾ ಕಡಿದು ನಾಶ ಮಾಡಿ ನೆಲಸಮ ಮಾಡಿ ನಾನು ಅರಣ್ಯದಲ್ಲಿ ಒತ್ತುವರಿ ಮಾಡಿದಂತೆ ಆ ಮನುಷ್ಯ ಹೇಳಿಕೆ ಕೊಡುತ್ತಾರೆ. ಅವರು ಈ ಸದನದಲ್ಲಿ ಇಲ್ಲ. ನಾನು ಹೆಚ್ಚು ಮಾತನಾಡಿದರೆ ಅವರು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ, ನಮಗೆ ದುಃಖ ಏನೆಂದರೆ, ಅವರು ನಿಜವಾಗಲೂ ಒಳ್ಳೆಯವರಿರಬಹುದು, ಅಥವಾ ಈ ಗಣಿ ವಿಚಾರದಲ್ಲಿ ಬಹಳ

ಒಳ್ಳೆಯ ಕೆಲಸ ಮಾಡಿರಬಹುದು ನಮಗೆ ಗೊತ್ತಿಲ್ಲ.; ಆದರೆ, ಒಂದು ಸಲ ಯಾವುದೋ ಒಂದು ವಿಚಾರದಲ್ಲಿ Press ನವರು publicity ಕೊಡುತ್ತಾರೆನ್ನುವ ಒಂದೇ ಒಂದು ಕಾರಣಕ್ಕೆ ಹಿಂದ್ಯಾವುದು, ಮುಂದ್ಯಾವುದು ಇವರು ಹೇಗೆ ಬದುಕಿದರು, ಇವರು ಏನು ಎನ್ನುವುದನ್ನು ಒಂದಿಷ್ಟೂ ತಿಳಿದುಕೊಳ್ಳದೆ ನಮ್ಮನ್ನು ಹರಾಜು ಹಾಕಿ ಬಿಡುತ್ತಾರೆ. ನಮಗೂ ಹೆಂಡತಿ, ಮಕ್ಕಳು, ಸಂಬಂಧಿಕರು, ಬೇಕಾದವರು, ಸ್ನೇಹಿತರು, ಬೆಳೆಸಿದವರು, ಜೊತೆಗೆ ಬೆಳೆದವರು, ಎಲ್ಲಾ ಇರುತ್ತಾರಲ್ಲ, ಎಲ್ಲಾ ಇರುತ್ತಾರಲ್ಲ ಅಧ್ಯಕ್ಷರೆ? ಹೇಗೆ ಬದುಕಬೇಕು ಈ ಸಮಾಜದಲ್ಲಿ? ಒತ್ತುವರಿ ಎಂದರೆ ಅದು ಎಂಥ ಮಹಾಕಳ್ಳತನ, ಕಳ್ಳನಿಗಿಂತ ಹೀನವಾಗಿ, ಆ ವಿಚಾರ ಕೋರ್ಟು ಮುಂದೆ ಇದೆ ಅದಕ್ಕಾಗಿ ನಾನು ಆ ವಿಚಾರಕ್ಕೆ ಹೋಗುವುದಿಲ್ಲ. ನಾನು ಖರೀದಿದಾರ, ನಾನು ಖರೀದಿ ಮಾಡಿರುವುದು ಒಂದು ವೇಳೆ ಅವರಿಗೆ ಸೇರುತ್ತದೆ ಎಂದರೆ ಮಹಾರಾಜ ಹಾಗೆ ತೆಗೆದುಕೊಂಡು ಹೋಗಲಿ ನನ್ನದೇನೂ ಆಕ್ಷೇಪಣೆ ಇಲ್ಲ. ಈ ದೇಶದ ಕಾನೂನಿಗಿಂತ ನಾನು ದೊಡ್ಡವನಲ್ಲ. ಆದರೆ, ವಿಚಾರಣೆ ಇಲ್ಲದೆ ಶಿಕ್ಷೆ ಕೊಡುವುದಿದೆಯಲ್ಲ ಇದನ್ನು ಸಹಿಸುವುದು ಬಹಳ ಕಷ್ಟ. ಇದರ ಜೊತೆಗೆ ನಾವು ಬಾಲಸುಬ್ರಮಣ್ಯಿಯನ್‌ರವರ ವರದಿಯನ್ನು ಸ್ವಾಗತಿಸುತ್ತೇವೆಂದು ಹೇಳಿದ್ದಾರೆ. ಬಾಲಸುಬ್ರಮಣ್ಯಿಯನ್‌ರವರು ಈ ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿ–ಗಳಾಗಿ ನಿವೃತ್ತರಾಗಿರತಕ್ಕಂಥವರು. ಅವರು ನನಗೆ ಇವತ್ತಿನವರೆಗೆ ನೋಟಿಸ್ ಮಾಡಿಲ್ಲ. ಅವರು ಈ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷನಾಗಿ ನನ್ನ ಜಮೀನಿಗೆ ಬಂದರು. ಯಡಿಯೂರಪ್ಪನವರೆ, ಅವರು ಬಂದಿದ್ದು ಹೇಗೆ ಇತ್ತೆಂದರೆ, Indo-Pakistan war ಗೆ ನಮ್ಮ ಭಾರತದ ಸೈನಿಕರು ನುಗ್ಗುವ ರೀತಿಯಲ್ಲಿ ಒಂದು ನೂರು ವೆಹಿಕಲ್ಸ್ ತೆಗೆದುಕೊಂಡು ಬಂದರು. ನನಗೆ ನೋಟಿಸ್ ಇಲ್ಲ. ನಾನು ತೋಟದಲ್ಲಿ ಕಾಯುತ್ತಾ ಕುಳಿತುಕೊಂಡಿದ್ದೆ. ಆ ಮನುಷ್ಯನಿಗೆ ಕರೆದು ಮಾತನಾಡುವ ಸೌಜನ್ಯವಿಲ್ಲ. ನಾನು ಒಬ್ಬ ಸಾರ್ವಜನಿಕ ಜೀವನದಲ್ಲಿದ್ದವನಾಗಿ ಒಬ್ಬ ಮಾಜಿ ಸಭಾಧ್ಯಕ್ಷನಾಗಿ, ಅವರ ಆಫೀಸ್‌ಗೆ ಹೋಗಿ ಅವರನ್ನು ಕಾಣಬೇಕೆಂದು ಚೀಟಿ ಕಳುಹಿಸಿದರೆ ನನಗೆ ಟೈಂ ಇಲ್ಲವೆಂದು ವಾಪಸ್ ಕಳುಹಿಸುತ್ತಾರೆ. ಮೂರು–ನಾಲ್ಕು ಸಾರಿ Pressನಲ್ಲಿ ರಮೇಶ್ ಕುಮಾರ್ ರವರ ಒತ್ತುವರಿ ಪ್ರಕರಣ, ಎಂದು ಬರುತ್ತದೆ. ಅಲ್ಲಿ ಏನಿದೆಯೋ, ಏನು ಬಂಡವಾಳ ಏನು ಬಂಡವಾಳ ಏನು ಬಂಗಾರ ಇದೆಯೋ, ಯಾವ

ಒತ್ತುವರಿಯೋ, ಇದರ ಹಿಂದೆ ಯಾರು ಇದ್ದಾರೆಯೋ ಗೊತ್ತಿಲ್ಲ. ತಾವು ಕೌನ್ಸಿಲ್ ಮೆಂಬರ್ ಆಗಿ PWD ಮಿನಿಸ್ಟರ್ ಆಗಿದ್ದಂಥ ಸಂದರ್ಭದಲ್ಲಿ ತಾವೂ ಕೂಡ ಇಂಥ ಸಂದರ್ಭವನ್ನು ಅನುಭವಿಸಿದ್ದೀರಿ. ಅವರಿಗೆ, ನನಗೆ, ನಿಮಗೆ ಅಥವಾ ಇನ್ನೊಬ್ಬರಿಗೆ ಇದು ತಪ್ಪಿದಲ್ಲ. 5 ವರ್ಷಗಳ ಕಾಲ ನಾನು ವಿಧಾನಸಭೆಯ ಅಧ್ಯಕ್ಷನಾಗಿದ್ದೆ. 6ನೇ ಅಕ್ಟೋಬರ್ 1999ರಲ್ಲಿ result ಬಂತು. 7ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಸರ್ಕಾರಿ Quarters ನ ಬೀಗದ ಕೈ ಕೊಟ್ಟೆ ನನಗೆ ಪ್ರತಿ ತಿಂಗಳು ಕಳುಹಿಸಿರುವಂಥ Newspaper, Magazine ಚೀಲಕ್ಕೆ ಹಾಕಿ ವಾಪಸ್ಸು ವಿಧಾನಸಭೆಗೆ ಕಳುಹಿಸಿದ್ದೆ. ಒಂದು foreign tour ನಾನು ಹೋಗುವುದಕ್ಕೆ ಆಗಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರೆ, ನೀವು ಹೋಗಿ ಬನ್ನಿ ಎಂದು ವಿರೋಧ ಪಕ್ಷದ ನಾಯಕರಾಗಿದ್ದ ಮಾನ್ಯ ಯಡಿಯೂರಪ್ಪನವರನ್ನು ಕಳುಹಿಸಿಕೊಟ್ಟಿದ್ದೆ. ಎರಡನೇ foreign tour ನನ್ನದೇ ಆದಂಥ ಹಣದ ಅನುಕೂಲ ಇತ್ತು. ಸರ್ಕಾರ ಕೊಡುವುದರ ಜೊತೆಗೆ ನನ್ನಲ್ಲಿರುವ ಹಣವನ್ನು ಹೊಂದಿಸಿಕೊಂಡು ಹೋಗಿ ಬಂದೆ. ಒಂದೂವರೆ ತಿಂಗಳಲ್ಲಿ ಅದರ ಲೆಕ್ಕ ಕೊಟ್ಟೆ. 1978 ರಲ್ಲಿ ಈ ಸದನಕ್ಕೆ ನಾನು ಆಯ್ಕೆ ಆಗಿ ಬಂದೆ. 1983ರಲ್ಲಿ ಮತ್ತು 1985 ರಲ್ಲಿ ಬಂದವರು ಬೆಂಗಳೂರಿನಲ್ಲಿ 7 ಅಂತಸ್ತಿನ ಮಹಡಿ ಕಟ್ಟಿದ್ದಾರೆ. ಇದನ್ನು ಯಾರೂ ಸಹ ಕೇಳಲಿಲ್ಲ. ಒಬ್ಬೊಬ್ಬರು ಐದಾರು ಸೈಟ್‌ಗಳನ್ನು ತೆಗೆದುಕೊಂಡರು, ಇವರನ್ನು ಸಹ ಯಾರೂ ಕೇಳಲಿಲ್ಲ. ನಾನು 1978ರಲ್ಲಿ ಗೆದ್ದು ಬಂದಿದೆ. ಆದರೆ, ನನಗೆ 1996ನೇ ಇಸವಿಯಲ್ಲಿ ಸೈಟ್ ಅನ್ನು ಕೊಟ್ಟರು. ಸೈಟ್ ಕೊಡಿ ಎಂದು ನಾನು ಯಾರನ್ನೂ ಸಹ ಕೇಳಲಿಲ್ಲ. ಮನೆ ಕಟ್ಟುವುದಕ್ಕೆ ಆಗದೆ ಇರತಕ್ಕಂಥ ಜಾಗದಲ್ಲಿ ಸೈಟ್ ಅನ್ನು ಕೊಟ್ಟಿದ್ದಾರೆ. ನನಗೆ ಅದರ ಬಗ್ಗೆ ಕೊರಗೇನೂ ಇಲ್ಲ. ನಾನೇನು ಬಿಟ್ಟಿ ಕೇಳುತ್ತಿಲ್ಲ ಮತ್ತೆ ಯಾರ ದಯೆ ಕೂಡ ನನಗೆ ಬೇಕಾಗಿಲ್ಲ. ನಾನು ಒಂದು ವೇಳೆ ಪ್ರಾಮಾಣಿಕವಾಗಿದ್ದರೆ, I am not doing any charitable service, I am expected to be like that. ಆದರೆ, ಈ ಮಾಧ್ಯಮದವರ ಕೈಯಲ್ಲಿ ಹೇಗೆ ಬದುಕಬೇಕೋ ನಮಗೆ ಗೊತ್ತಾಗುವುದಿಲ್ಲ. ಬಹುಶಃ ಇವರಿಗೊಂದು ಛಲ ಇರಬೇಕೆಂದು ಕಾಣುತ್ತದೆ. Sensitive ಆಗಿ ಇರತಕ್ಕಂಥವರು ಒಬ್ಬರು, ಇಬ್ಬರು ಇದ್ದರೆ ಅವರು ಸತ್ತು ಹೋಗಬೇಕು ಅಥವಾ

ಬಿಟ್ಟು ಹೋಗಬೇಕು. ಇವತ್ತಿನದಿವಸ ಎಲ್ಲರು ಭ್ರಷ್ಟರಾಗಿದ್ದರೆ ಚೆನ್ನಾಗಿತ್ತು ಎಂಬುದು ಅವರು ಇರಾದೆ ಎಂದು ಕಾಣುತ್ತದೆ. ಇದರಿಂದ ಎಷ್ಟು ನೋವನ್ನು ನಾನು ಮತ್ತು ನನ್ನ ಕುಟುಂಬದವರು ಅನುಭವಿಸಿರಬೇಕು ನೀವೇ ಹೇಳಿ? ಯಾರೋ ಸತ್ತರೆ ಆ ಕೇಸ್‌ನಲ್ಲಿ ನನ್ನನ್ನು ಅಪರಾಧಿ ಮಾಡುತ್ತಾರೆ. 7ನೇ ಘಟನೆ ನಡೆಯುತ್ತಿದೆ, 8ನೇ ತಾರೀಖಿನ ದಿವಸ ಕೌಂಟಿಗ್ ಇರುತ್ತದೆ. 12ನೇ ತಾರೀಖಿನ ದಿವಸ ನನ್ನ ಹೆಂಡತಿ ನನ್ನ ಮಗಳನ್ನು ನೋಡುವುದಕ್ಕೆ ವಿದೇಶಕ್ಕೆ ಹೋಗಬೇಕಾಗಿತ್ತು. ಈ ರೀತಿಯಾದಾಗ ನಮ್ಮ ಪರಿಸ್ಥಿತಿ ಏನಾಗಿರಬೇಕು? ನಾವೂ ಮನುಷ್ಯರಲ್ಲವೇ? ನಾವೇನು ಸ್ಟೀಲ್, ಸಿಮೆಂಟ್‌ನಿಂದ ಮಾಡಿದಂಥ ಜನರೇ? ನಾವು ಕೂಡ ಮಾಂಸ-ರಕ್ತಗಳಿಂದ ಇರತಕ್ಕಂಥರಲ್ಲವೆ? ಎಲ್ಲೋ ಒಂದು ಕಡೆ ಬಾಲಸುಬ್ರಹ್ಮಣ್ಯಿಯನ್‌ರವರ ವರದಿಯನ್ನು ಸ್ವಾಗತ ಮಾಡುವುದಕ್ಕೆ ಮತ್ತು ಅದನ್ನು ಅನುಷ್ಠಾನಗೊಳಿಸುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ, ನಾನೇ ಇಂಥ ಒಂದು ಅವರ ಭೇಟಿಗೆ ಬಲಿಯಾಗಿದ್ದೇನೆ. ಮಾನ್ಯ ಎ.ಟಿ.ರಾಮಸ್ವಾಮಿಯವರ ಮತ್ತು ಅವರ ವರದಿಯನ್ನು ದಯಮಾಡಿ ತೆಗೆದುಕೊಳ್ಳಿ. ಬೆಂಗಳೂರಿನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಜಮೀನನ್ನು ಯಾರ್‍ಯಾರು ಕಬಳಿಸಿದ್ದಾರೆಯೋ ಅವರೆಲ್ಲರನ್ನೂ ಗಲ್ಲಿಗೆ ಹಾಕಿ. ಒಂದು ವೇಳೆ ರಮೇಶ್ ಕುಮಾರ್ ಮಾಡಿದ್ದರೆ ನೀವು ಶಿಕ್ಷೆ ಕೊಡುವವರೆಗೆ ನಾನು ಕಾಯುವುದಿಲ್ಲ. ಸಾಬೀತು ಮಾಡಿ ಹೇಳಿದರೆ ನಾನೇ ಬಂದು ನೇಣುಕಂಬಕ್ಕೆ ನಿಂತುಬಿಡುತ್ತೇನೆ. ನನ್ನ ಗೋಳಿನ ಕತೆ ಹೇಳಿ ಮಾತು ಮುಕ್ತಾಯ ಮಾಡುತ್ತೇನೆ. ಸಹೃದಯಿಗಳಾದ ತಾವು ನನಗೆ ತೋರಿಸಿದ ಔದಾರ್ಯಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

9. ಪ್ರಕಟಣೆ

ಅಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡೆವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್‌ನಲ್ಲಿ 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಶೇಷ ಒಪ್ಪಂದಗಳು ವಿಧೇಯಕವನ್ನು ದಿನಾಂಕ 10-06-